ಐಕ್ಯರಂಗ ವಿಶೇಷಾಂಕ

ಪಶ್ಚಿಮಬಂಗಾಳ ಎಡರಂಗ



4

ಪಶ್ಚಿಮ ಬಂಗಾಳದ ಜನತೆಗೆ ಲಾಲ ಸಲಾಮ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 26 ಜೂನ್ 28, 1981 ಬೆಲೆ : 60 ಪೈಸೆ

ಜೂನ್ 22, 1981ಕ್ಕೆ ಪ. ಬಂಗಾಲದಲ್ಲಿ ಎಡರಂಗ ಸರಕಾರ ಅಸ್ತಿತ್ವಕ್ಕೆ ಬಂದು ನಾಲ್ಕು ವರ್ಷಗಳಾದವು. ಈ ಅವಧಿಯಲ್ಲಿ ರಾಜ್ಯದ ಜನತೆಯ ಸರ್ವತೋಮುಖ ಅಭಿವೃದ್ಧಿಗೆ ಎಡರಂಗ ಸರಕಾರ ಅಪಾರವಾಗಿ ಶ್ರಮಿಸುತ್ತಿದೆ. ಈ ಸಂದರ್ಭದಲ್ಲಿ ಎಡರಂಗ ಸರಕಾರದ ಸಾಧನೆಗಳನ್ನು ಕುರಿತು ನಮ್ಮ ಓದುಗರಿಗೆ ವಿಶೇಷಾಂಕವೊಂದನ್ನು ಒದಗಿಸುತ್ತಿದ್ದೇವೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಬಂಗಾಳದ ಪಾತ್ರ

1885ರಲ್ಲಿ ಬಾಂಬೈಯ ಕಾಂಗ್ರೆಸ್ ಜನ್ಮತಳೆದ ಪ್ರಾರಂಭದಿಂದ 1947ರ ಆಗಸ್ಟರಂದು ಮಧ್ಯರಾತ್ರಿ ಬ್ರಿಟಿಷರಿಂದ ಭಾರತೀಯರಿಗೆ ರಾಜಕೀಯ ಅಧಿಕಾರ ಹಸ್ತಾಂತರವಾಗುವವರೆಗಿನ ಇಡೀ 62 ವರ್ಷಗಳ ಅವಧಿಯಲ್ಲಿ ಭಾರತೀಯರು ಬ್ರಿಟಿಷರ ವಿರುದ್ಧ ನಡೆಸಿದ ಸಾವುಬದುಕಿನ ಹೋರಾಟದಲ್ಲಿ ಬಂಗಾಲವು ಮುಂಚೂಣಿಯಲ್ಲಿತ್ತು. "ಬಂಗಾಳದ ಇಂದಿನ ಯೋಚನೆ ಮಿಕ್ಕುಳಿದ ಭಾರತಕ್ಕೆ ನಾಳಿನ ಅನುಸರಣೆ" ಎಂದು ಗೋಖಲೆಯವರು ಹೇಳಿದ್ದು ತುಂಬ ಅರ್ಥಪೂರ್ಣ.

ಗೋಖಲೆಯವರ ಈ ಹೇಳಿಕೆಯ ಪುನರುಚ್ಚಾರ ಬಂಗಾಲಿ ಜನಾಂಗವಾದಿಗಳಿಗೆ ಇತರ ಪ್ರದೇಶಗಳ ಜನತೆಯ ಬಗ್ಗೆ ತಾತ್ಸಾರ ಭಾವನೆಯನ್ನು ಕೆರಳಿಸಿರುವುದಾದರೂ ಚರಿತ್ರೆಯನ್ನು ಅವಲೋಕಿಸಿದಾಗ ದೇಶದ ಅನೇಕ ರಂಗಗಳಲ್ಲಿಯೂ ಮತ್ತು ರಾಷ್ಟ್ರೀಯ ಹೋರಾಟದಲ್ಲಿಯೂ ಬಂಗಾಲ ಮುಂದಿರುವುದನ್ನು ಮನಗಾಣಬಹುದಾದ್ದರಿಂದ ಗೋಖಲೆಯವರ ಹೇಳಿಕೆಯ ಸತ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ವಿಷಯದಲ್ಲಿ ಈ ಮಾತು ಇನ್ನೂ ಹೆಚ್ಚು ಅರ್ಥಪೂರ್ಣವಾಗಿದೆ.

ಕಾಂಗ್ರೆಸ್ ಸ್ಥಾಪನೆಗೆ ಒಂದು ಹಿನ್ನೆಲೆ ಇದೆ. ಈ ಚಾರಿತ್ರಿಕ ಹಿನ್ನೆಲೆಯಲ್ಲಿ ಬಂಗಾಲಕ್ಕೆ ಮಹತ್ವದ ಪಾತ್ರವಿದೆ. ರಾಜಕೀಯ ರಂಗದಲ್ಲಿ ಕಾಂಗ್ರೆಸ್ ಪಕ್ಷವು ತನ್ನ ಪ್ರಥಮ ಹೆಜ್ಜೆ ಇಡುವುದಕ್ಕೆ 9 ವರ್ಷಗಳ ಮುಂಚಿತವಾಗಿಯೇ 1876ರಲ್ಲಿ ಬಂಗಾಲದಲ್ಲಿ ಸುರೇಂದ್ರನಾಥ ಬ್ಯಾನರ್ಜಿ, ಆನಂದ ಮೋಹನ ಬಸು ಮುಂತಾದವರು ಭಾರತೀಯ ಸಂಘವೊಂದನ್ನು ಸ್ಥಾಪಿಸಿದರು. ಭಾರತೀಯರಲ್ಲಿ ಸ್ವಾತಂತ್ರ್ಯಪ್ರಿಯತೆಯನ್ನು ಬೆಳೆಸುವಲ್ಲಿ ಸುರೇಂದ್ರನಾಥರವರು ವಹಿಸಿದ ಮಹತ್ವಪೂರ್ಣ ಪಾತ್ರ ಅವರಿಗೆ 'ಭಾರತ ರಾಷ್ಟ್ರೀಯತೆಯ ಸಂಕೇತ'ವೆಂಬ ಹೆಸರನ್ನು ಗಳಿಸಿಕೊಟ್ಟಿತು. ಪ್ರತಿಭಾವಂತ ಭಾಷಣಕಾರರಾದ ಇವರು ಜನತೆಯಲ್ಲಿ ರಾಷ್ಟ್ರಪ್ರೇಮವನ್ನು ಪ್ರಚೋದಿಸಲು ದೇಶದ ಉದ್ದಗಲಕ್ಕೂ ಸಂಚರಿಸಿದರು. ಜನರ ಮೇಲೆ ಭಾರೀ ಪ್ರಭಾವ ಬೀರಿದರು. ಭಾರತೀಯ ಸಂಘವು ಸ್ಥಾಪನೆಯಾದ 7 ವರ್ಷಗಳ ನಂತರ ಈ ಸಂಘದ ಪ್ರಥಮ ರಾಷ್ಟ್ರೀಯ ಸಮ್ಮೇಳನವು 1883ರಲ್ಲಿ ಬಂಗಾಲದಲ್ಲಿಯೇ ನಡೆಯಿತು. ನಂತರ 1886ರಲ್ಲಿ ಕಾಂಗ್ರೆಸ್ಸಿನ ದ್ವಿತೀಯ ಸಮ್ಮೇಳನ ಕಲ್ಕತ್ತಾದಲ್ಲೇ ನಡೆಯಿತೆಂಬುದನ್ನು ಸ್ಮರಿಸಿಕೊಳ್ಳಬಹುದು. ಈ ಸಮ್ಮೇಳನದಲ್ಲೇ ಬಂಕಿಮಚಂದ್ರರ 'ವಂದೇ ಮಾತರಂ' ಗೀತೆಯನ್ನು ರವೀಂದ್ರರು ಸುಶ್ರಾವ್ಯವಾಗಿ ಹಾಡಿದರು.

ಅತಿವಿಧೇಯ ಪ್ರವೃತ್ತಿ :

ಕಾಂಗ್ರೆಸ್ ಚಳುವಳಿಯ ಬಂಡವಾಳಶಾಹಿ ಗುಣದಿಂದಾಗಿ ಮತ್ತು ಬ್ರಿಟಿಷ್ ಸರಕಾರದ ಸಂವಿಧಾನ ಕಾನೂನುಗಳಿಗೆ ಅತಿವಿಧೇಯತೆಯನ್ನು ತೋರಿಸುವ ಪ್ರವೃತ್ತಿ ಅನೇಕರನ್ನು ನಿರಾಶೆಗೊಳಿಸಿತಲ್ಲದೇ ಕೇವಲ ಸಮಾಜದ ಉನ್ನತವರ್ಗಗಳ ಲಾಭಕ್ಕಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳೆದುರು ಮಂಡಿಯೂರಿ ಬೇಡುವ ಬದಲು ಹೊಸದೊಂದು ಮಾರ್ಗವನ್ನು ಕಂಡುಹಿಡಿಯಲು ಪ್ರೇರೇಪಿಸಿತು. ಈ ಹಿನ್ನೆಲೆಯಲ್ಲಿ 'ಉಗ್ರಗಾಮಿ ರಾಜಕೀಯ'ವೆಂದು ಕರೆಯಲಾದ ಚಟುವಟಿಕೆಗಳ ಅಂಕುರಾರ್ಪಣೆಯಾಯಿತು. ಇದರ ಪರಿಣಾಮವಾಗಿಯೇ ಬಂಗಾಳದಲ್ಲಿ ಅರವಿಂದ, ಬಾರೀಂದ್ರ ಕುಮಾರ್ ಘೋಷ್ ಮತ್ತು ರಾಷ್ಟ್ರಮಟ್ಟದಲ್ಲಿ ತಿಲಕರಂಥ ಮುಖಂಡರು ಮತ್ತವರ ಅನುಯಾಯಿಗಳ ಗುಂಪೊಂದು ಬೆಳೆಯಿತು. ಭಾಷಣ ಮಾಡುವುದರಲ್ಲಿ ಸುರೇಂದ್ರನಾಥರಿಗೆ ಪ್ರತಿಸ್ಪರ್ಧಿಯಾಗಿ ಬೆಳೆದುಬಂದ ಬಿಪಿನ್‌ಚಂದ್ರಪಾಲರ ಭಾರತೀಯ ರಾಷ್ಟ್ರೀಯತೆಗೆ ಸಂಬಂಧಿಸಿದ ವಿಷಯಗಳ ಮೇಲಿನ ತಮ್ಮ ಅಮೋಘ ಭಾಷಣಗಳು ಉಗ್ರವಾದಿ ರಾಜಕಾರಣಿಗಳ ಕಲ್ಪನೆಯನ್ನು ಉಜ್ವಲಗೊಳಿಸಿದವು. ಭಾರತದ ಕ್ರಾಂತಿಕಾರಿ ಚಳುವಳಿಯ ಇತಿಹಾಸದಲ್ಲಿ ಲಾಲಾಲಜಪತ್ ರಾಯ್, ಬಾಲಗಂಗಾಧರ ತಿಲಕ್, ಬಿಪಿನ್‌ಚಂದ್ರಪಾಲ ಈ ಮೂವರು ಲಾಲ್-ಬಾಲ್-ಪಾಲ್ ಎಂದು ಬಂಗಾಳದಲ್ಲಿ ಮನೆಮಾತಾಗಿದ್ದರು. ಸುಧಾರಣಾವಾದಿಗಳು ಮತ್ತು ಉಗ್ರಗಾಮಿಗಳ ನಡುವಿನ ಸೈದ್ಧಾಂತಿಕ ಸಂಘರ್ಷವು ಯಾವ ಮಟ್ಟಕ್ಕೆ ಮುಟ್ಟಿತ್ತೆಂದರೆ 1907ರ ಸೂರತ್ ಕಾಂಗ್ರೆಸ್ ಅಧಿವೇಶನವು ಪ್ರಭಾವಶೂನ್ಯವಾಗಿ ಹೋಯಿತು.

ಸೈದ್ಧಾಂತಿಕ ಸಂಘರ್ಷ

ಈ ಸೈದ್ಧಾಂತಿಕ ಸಂಘರ್ಷವು ಅಲ್ಲಿಗೇ ಮುಗಿಯಲಿಲ್ಲ. 20ರ ದಶಕದಲ್ಲಿ ಕಾಂಗ್ರೆಸ್ ಪಕ್ಷದೊಳಗೆ ದೇಶಬಂಧು ಚಿತ್ತರಂಜನದಾಸ್ ನೇತೃತ್ವದ 'ಬದಲಾವಣೆಯ ಪರ' ಮತ್ತು ಗಾಂಧೀಜಿ ನೇತೃತ್ವದ 'ಬದಲಾವಣೆಯ ವಿರೋಧ' ಗುಂಪುಗಳಾದ ಸಂದರ್ಭದಲ್ಲಿ ಈ ಸೈದ್ಧಾಂತಿಕ ಸಂಘರ್ಷ ಪುನಃ ತಲೆಎತ್ತಿತ್ತು. ಮುಂದೆ 1924ರಲ್ಲಿ ದೇಶಬಂಧುರವರು ಸ್ಥಾಪಿಸಿದ ಸ್ವರಾಜ್ಯ ಪಕ್ಷವು ಈ ಸಂಘರ್ಷದ ಪ್ರತಿಬಿಂಬವಾಗಿ ಮೂಡಿತು.

1905ರಲ್ಲಿ ಬಂಗಾಳದಲ್ಲಿ ವಿಭಜನೆಯ ವಿರೋಧಿ ಚಳುವಳಿ ಭಾರತದ ರಾಷ್ಟ್ರೀಯ ಚಳುವಳಿಯ ಮೇಲೆ ಪರಿಣಾಮಕಾರಿ ಪ್ರಭಾವ ಬೀರಿತು. 1911ರಲ್ಲಿ ದಿಲ್ಲಿ ದರ್ಬಾರಿನ ಸಮಯದಲ್ಲಿ ಬಂಗಾಳದ ಜನತೆ ಬಂಡಾಯದ ಬಾವುಟದಡಿ ಒಂದುಗೂಡಿ ರಾಷ್ಟ್ರಪ್ರೇಮ ಹಾಗೂ ರಾಷ್ಟ್ರೀಯ ಐಕ್ಯತೆಯನ್ನು ಮುರಿಯುವ ವಿಧಾನವಾದ ಕರ್ಜನ್‌ನ ವಿಭಜನೆಯ ನೀತಿಯನ್ನು ವಿರೋಧಿಸಿ ಹೋರಾಡಿದರು. ಈ ಚಳುವಳಿಯಲ್ಲಿ ಕೇವಲ ರಾಜಕೀಯ ಮುಖಂಡರು ಮಾತ್ರವಲ್ಲದೇ ರವೀಂದ್ರನಾಥ ತಾಕೂರ್‌ರಂತಹ ಸಾಂಸ್ಕೃತಿಕ ಚಳುವಳಿಯ ಮುಂದಾಳುಗಳು ಸಹ ಸಕ್ರಿಯವಾಗಿ ಭಾಗವಹಿಸಿ ಬ್ರಿಟಿಷರ ದಾಸ್ಯ ಮತ್ತು ಶೋಷಣೆಯ ವಿರುದ್ಧ ದೇಶದಾದ್ಯಂತ ಜಾಗೃತಿ ಮೂಡಿಸಿದರು.

ಕ್ರಾಂತಿಕಾರೀ ಚಟುವಟಿಕೆ :

ಬಂಗಾಳ ವಿಭಜನೆ ವಿರೋಧಿ ಚಳುವಳಿಯ ಅಹಿಂಸಾತ್ಮಕ ಮಾರ್ಗವು ಅತೀ ಶೀಘ್ರವಾಗಿ ಬಂಗಾಳಿ ಯುವಜನತೆಯ ಒಂದು ವಿಭಾಗಕ್ಕೆ ಅತೃಪ್ತಿ ಮೂಡಿಸಿತು. ದೇಶವನ್ನು ವಿದೇಶಿ ದಾಸ್ಯದಿಂದ ಮುಕ್ತಗೊಳಿಸಲು ಏನಾದರೂ ಸಾಹಸ ಕಾರ್ಯವನ್ನು ಮಾಡಬೇಕೆಂಬ ಆಸಕ್ತಿ ಈ ಯುವಕರಲ್ಲಿತ್ತು. ಸಂವಿಧಾನಬದ್ಧ ವಿಧಾನಗಳು ಅವರಿಗೆ ಸರಿಬೀಳಲಿಲ್ಲ. ಈ ಅತೃಪ್ತ ಯುವಕರಿಂದ ಕೂಡಿದ 'ಅನುಶೀಲನ' ಮತ್ತು 'ಜುಗಾಂತರ ಎಂಬ ಸಂಸ್ಥೆಗಳು ಹುಟ್ಟಿಕೊಂಡವು. ಈ ಯುವಕರನ್ನು ಭಯೋತ್ಪಾದಕರೆಂದು ತಪ್ಪಾಗಿ ಹೆಸರಿಸಿದರೂ ಸಹ ಇವರಿಗೆ ಭಯೋತ್ಪಾದನೆ ಉಂಟುಮಾಡುವುದೇ ಮೂಲ ಉದ್ದೇಶವಾಗಿರಲಿಲ್ಲ. ದೇಶವನ್ನು ಆದಷ್ಟು ಬೇಗ ಗುಲಾಮಗಿರಿಯಿಂದ ಮುಕ್ತಗೊಳಿಸುವುದು ಈ ಯುವಕರ ಉತ್ಕಟ ಇಚ್ಛೆಯಾಗಿತ್ತು. ಖುದೀರಾಮ್, ಪ್ರಫುಲ್ ಚಾಕಿ, ಕನ್ಹಯ್ಯಾಲಾಲ್ ದತ್ತ, ಸತ್ಯೇನ್‌ಭೋಸ್, ಜತೀನ್ ಮುಖರ್ಜಿ (ಭಾಗಾಜತೀನ್), ಚಿತ್ತಪ್ರಿಯ ದಾಸಗುಪ್ತಾ ಈ ಮುಂತಾದವರು ಈ ಶತಮಾನದ ಪ್ರಾರಂಭದ ಎರಡು ದಶಕಗಳಲ್ಲಿ ತಮ್ಮದೇ ಆದ ಮಾರ್ಗದಲ್ಲಿ ಸಾವನ್ನು ಲೆಕ್ಕಿಸದೆ ಹೋರಾಡಿದವರಲ್ಲಿ ಕೆಲವರು. ಚಿತ್ತಗಾಂಗ್ ಸಶಸ್ತ್ರ ದಂಗೆಯಲ್ಲಿ ಅನೇಕ ಎಳೆಯ ಕ್ರಾಂತಿಕಾರಿಗಳು ಹುತಾತ್ಮರಾದರು. ಇವರು ಅನುಶೀಲನ್ ಮತ್ತು ಜುಗಾಂತರ ಕ್ರಾಂತಿಕಾರಿ ಸಂಘಟನೆಗಳ ಅನುಯಾಯಿಗಳಾಗಿದ್ದರು.

ಸುಭಾಸ್ ಭೋಸ್‌ರ ನೇತೃತ್ವದ ಆಜಾದ್‌ಹಿಂದ್ ಸೈನಿಕರ ತ್ಯಾಗ ಬಲಿದಾನಗಳೂ ಜನತೆಯ ಮನದಲ್ಲಿ ಹಸಿರಾಗಿದೆ. ಈ ಸಂದರ್ಭದಲ್ಲೇ 1946ರ ನೌಕಾದಳದ ದಂಗೆಯ ಹುತಾತ್ಮರನ್ನೂ ಸ್ಮರಿಸಿಕೊಳ್ಳಲೇಬೇಕು.

ಒಂದನೆಯ ಮಹಾಯುದ್ಧದ ಪರಿಣಾಮಗಳು ಸ್ವಾತಂತ್ರ್ಯ ಹೋರಾಟಗಾರರ ಕಾರ್ಯವಿಧಾನಗಳಲ್ಲಿ ಬದಲಾವಣೆಗಳನ್ನು ತಂದಿತ್ತು. 1917ರಲ್ಲಿ ನಡೆದ ರಷ್ಯದ ಸಮಾಜವಾದಿ ಕ್ರಾಂತಿಯು ಭಾರತದ ಕ್ರಾಂತಿಕಾರಿಗಳ ದೃಷ್ಟಿಕೋನದಲ್ಲಿ ಮಹತ್ವಪೂರ್ಣ ಬದಲಾವಣೆಯನ್ನುಂಟುಮಾಡಿತು. ಭಾರತದ ರಾಜಕೀಯ ರಂಗದಲ್ಲಿ ಅಂದಿನ ಪರಿಸ್ಥಿತಿಯಲ್ಲಿ ಗಾಂಧೀಜಿ ನೇತೃತ್ವದ ಬಂಡವಾಳಶಾಹಿ ರಾಜಕಾರಣಿಗಳೇ ಪ್ರಾಧಾನ್ಯತೆ ಪಡೆದು ಕ್ರಾಂತಿಕಾರಿಗಳು ಅಲ್ಪಸಂಖ್ಯಾತರಾಗಿದ್ದರೂ ಸಹ ದೇಶದ ರಾಜಕೀಯ ಭವಿಷ್ಯದಲ್ಲಿ ಮಹತ್ತರ ಪಾತ್ರವಹಿಸುವವರಾಗಿದ್ದರು.

ಕಾಂ. ಮುಜಾಫರ್ ಅಹಮ್ಮದ್, ಕಾಂ. ಅಬ್ದುಲ್ ಆಲಿ ಮತ್ತಿತರರ ಪರಿಶ್ರಮದಿಂದ ಕಮ್ಯುನಿಸ್ಟ್ ಪಕ್ಷವು ಉದಯಿಸಿತು. 1924ರ ಕಾಕೋರಿ ಒಳಸಂಚಿನ ಮೊಕದ್ದಮೆ, ಮೀರತ್ ಮೊಕದ್ದಮೆ ಮುಂತಾದವುಗಳು ಭಾರತದ ರಾಜಕೀಯ ರಂಗದ ಹೊಸ ಬೆಳವಣಿಗೆಗಳ ಸೂಚಕವಾಗಿದ್ದವು. ಈ ಕ್ರಾಂತಿಕಾರಿ ಚಟುವಟಿಕೆಗಳು ಗಾಂಧೀ ನೇತೃತ್ವದ ಚಳುವಳಿಗೆ ಪ್ರತಿಸ್ಪರ್ಧಿಯಾಗಿರದೆ ಸ್ವಾತಂತ್ರ್ಯಹೋರಾಟಕ್ಕೆ ಪೂರಕವಾಗಿತ್ತು.

ಗಾಂಧೀಯವರ ಹೋರಾಟಗಳ ಜೊತೆಜೊತೆಗೆ ರೈತ-ಕಾರ್ಮಿಕರ ಪಕ್ಷ ಮತ್ತು ಅಂತಹವೇ ಸಂಘಟನೆಗಳ ಹೋರಾಟವನ್ನು ಕಡೆಗಣಿಸುವಂತಿಲ್ಲ. ಸಮಾಜವಾದ ಮತ್ತು ಸಮತಾವಾದದ ತತ್ವಗಳು ಹರಡಿದಂತೆಲ್ಲ ಇವುಗಳು ದಿನೇದಿನೇ ತಮ್ಮ ಶಕ್ತಿಯನ್ನು ವೃದ್ಧಿಸಿಕೊಂಡವು. ಇದರಿಂದಾಗಿ ದೇಶದ ಜನತೆ ಸ್ವಾತಂತ್ರ್ಯ ಹೋರಾಟದೊಟ್ಟಿಗೇ ಉಳಿದ ವಿಷಯಗಳ ಬಗ್ಗೆಯೂ ಯೋಚಿಸುವಂತಾಯಿತು.

1920-21ರ ಅಸಹಕಾರ ಚಳುವಳಿ, 30-31ರ ಕಾನೂನುಭಂಗ ಚಳುವಳಿ ಮತ್ತು 1942ರ ಕ್ವಿಟ್ ಇಂಡಿಯಾ ಚಳುವಳಿ ಇವುಗಳು ಗಾಂಧೀ ನೇತೃತ್ವದ ಸ್ವಾತಂತ್ರ್ಯ ಹೋರಾಟದ ಮೂರು ಮೈಲಿಗಲ್ಲುಗಳು. ಈ ಮೂರು ಚಳುವಳಿಗಳಲ್ಲಿ ಬಂಗಾಳದ ಜನತೆಯು ಅಸಾಧಾರಣ ತ್ಯಾಗ ಬಲಿದಾನಗಳ ಮೂಲಕ ಅತ್ಯಂತ ಸಕ್ರಿಯವಾಗಿ ಭಾಗಿಯಾಗಿತ್ತು. ಅನೇಕರು ವಿಚಾರಣೆ ಇಲ್ಲದೆ ಬಂಧನಕ್ಕೊಳಗಾದರು ಆಸ್ತಿ–ಪಾಸ್ತಿ ಕಳೆದುಕೊಂಡರು. ಚಿತ್ರಹಿಂಸೆಗೆ ಗುರಿಯಾಗಿ ಅಂಗವಿಹೀನರಾದರು. ಕೆಲವರು ವೀರಮರಣವನ್ನಪ್ಪಿದರು. ಉಪ್ಪಿನ ಸತ್ಯಾಗ್ರಹ ಮತ್ತು ಅಗಸ್ಟ್ ಚಳುವಳಿಯಲ್ಲಿ ಪ.ಬಂಗಾಳದ ಮಿಡ್ನಾಪುರ್ ಜಿಲ್ಲೆಯ ಜನತೆಯಂತೂ ಮಹತ್ವಪೂರ್ಣ ಪಾತ್ರವಹಿಸಿದ್ದರು.

ಬ್ರಿಟಿಷರ ವಿರುದ್ಧ ನಡೆದ ಎಲ್ಲ ಹೋರಾಟಗಳ ಮುಂಚೂಣಿಯಲ್ಲಿ ಬಂಗಾಳದ ಜನತೆ ಇತ್ತು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕಿಡಿಯೂ ಸಹ ಬಂಗಾಳದ ಬ್ಯಾರಕ್‌ಪುರದಿಂದ ಸಿಡಿಯಿತೆಂಬುದನ್ನೂ ಸಹ ಇಲ್ಲಿ ಸ್ಮರಿಸಬಹುದು.

ಬಂಗಾಳದ ಜನತೆಯ ವಿರೋಚಿತ ಪರಂಪರೆ ಕಳೆಗುಂದಿಲ್ಲ. ಆ ಮಹಾನ್ ಪರಂಪರೆ ತನ್ನ ಪ್ರಕಾಶಮಾನವಾದ ಕಿಡಿಗಳನ್ನು ಹೊರಚೆಲ್ಲುತ್ತಾ ಬೆಳೆಯುತ್ತಿದೆ.

o

ಪ. ಬಂಗಾಳದ ಎಡರಂಗ ಸರ್ಕಾರದ

ಕಾರ್ಮಿಕ ಮತ್ತು ಉದ್ಯೋಗ ನೀತಿ

–ಕೃಷ್ಣಪಾದ್ ಘೋಷ್, ಕಾರ್ಮಿಕ ಸಚಿವ

"ಯಾವ ಸಮಾಜದಲ್ಲಿ ಸಂಪತ್ತಿನ ವಿತರಣೆಯಲ್ಲಿ ಅಸಮಾನತೆ ಇದೆಯೋ ಅಲ್ಲಿ ನ್ಯಾಯ ಎಂದರೆ ಸರಳವಾಗಿ ಬಲಿಷ್ಠರ ಹಿತಾಸಕ್ತಿ ಎಂದೇ ಅರ್ಥವಾಗುತ್ತದೆ".

ಈ ಹೇಳಿಕೆ ಪ್ಲೇಟೋನ ರಿಪಬ್ಲಿಕ್‌ನಷ್ಟು ಹಳೆಯದಾದರೂ ಇವತ್ತಿನ ಇಂಡಿಯಾದಲ್ಲಿಯೂ ಇದು ಅರ್ಥವಂತಿಕೆಯನ್ನು ಕಳೆದುಕೊಂಡಿಲ್ಲ. ಅತ್ಯಂತ ದೊಡ್ಡ ಪ್ರಜಾಪ್ರಭುತ್ವವು ಕೂಡ ಮಿಲಿಯಗಟ್ಟಲೆ ಜನರಿಗೆ ನ್ಯಾಯ ಕೊಡುತ್ತಿಲ್ಲ. ಮಕ್ಕಳಿಗೆ ಆಶ್ರಯ, ಮಹಿಳೆಯರಿಗೆ ಭದ್ರತೆ ಕೊಡುತ್ತಿಲ್ಲ.

ಈ ಎಲ್ಲ ಮಿತಿಗಳನ್ನು ಅಂತೂ ಕೂಡ, ಪ. ಬಂಗಾಳದ ಎಡರಂಗ ಸರಕಾರವು ಚಿತ್ರವನ್ನು ಬೇರೆ ರೀತಿ ಬರೆಯಲು ಇಚ್ಛಿಸುತ್ತದೆ. ಮನುಷ್ಯ ಒಬ್ಬ ಮನುಷ್ಯನಾಗಿ ಬಾಳಬೇಕೆಂದು ಅದು ಬಯಸುತ್ತದೆ. ನರಳುತ್ತಿರುವ ಜನತೆಗೆ ನ್ಯಾಯ ಒದಗಿಸಲು ಕಷ್ಟಪಡುತ್ತಿದೆ. ಕೈಗಾರಿಕಾ ಸಂಬಂಧಗಳಲ್ಲಿ ದುಡಿಯುವ ವರ್ಗದ ಹಿತಾಸಕ್ತಿಯನ್ನು ಎತ್ತಿಹಿಡಿಯಲು ಪ್ರಯತ್ನಿಸುತ್ತಿದೆ.

ಹಿಂದಿನ ಕಾಂಗ್ರೆಸ್ ಸರ್ಕಾರವು ತುರ್ತು ಪರಿಸ್ಥಿತಿಯಲ್ಲಿ ಟ್ರೇಡ್ ಯೂನಿಯನ್ ಹಕ್ಕುಗಳೆಲ್ಲವನ್ನೂ ಕಿತ್ತುಕೊಂಡಿತ್ತು. ಮುಷ್ಕರದ ಹಕ್ಕು ಮತ್ತು ಸಂಘಟನೆಯ ಹಕ್ಕು ಕೂಡ ನಿರ್ನಾಮವಾಗಿತ್ತು. ಇದರ ಪ್ರಯೋಜನವನ್ನು ಪಡೆದುಕೊಂಡ ಮಾಲೀಕರು ಕಾರ್ಮಿಕರ ಮೇಲೆ ಆಕ್ರಮಣ ಮಾಡುತ್ತಿದ್ದರು. ಸಾವಿರಾರು ಕೆಲಸಗಾರರು ವಜಾ ಆಗುತ್ತಿದ್ದರು. ಬೋನಸ್ ನೀಡಿಕೆ ಅರ್ಧಕ್ಕೆ ಇಳಿದಿತ್ತು.

ಎಡರಂಗ ಸರ್ಕಾರವು ಅಧಿಕಾರ ವಹಿಸಿಕೊಂಡ ಕೂಡಲೇ ಎಲ್ಲ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಪುನಃಸ್ಥಾಪಿಸಲಾಯಿತು. ಕೈಗಾರಿಕಾ ವಿವಾದಗಳಲ್ಲಿ ಪೋಲೀಸರು ಮತ್ತು ಆಡಳಿತವು ಪಕ್ಷಾತೀತವಾಗಿ ಉಳಿಯುವಂತೆ ಆದೇಶಿಸಲಾಯಿತು. ವಿವಾದಗಳು ಶಾಂತಿಯುತವಾಗಿ, ಕಾರ್ಮಿಕರ ಪರವಾಗಿ ಕೊನೆಗೊಳ್ಳುವಂತೆ ನೋಡಿಕೊಳ್ಳುವುದು ಅವರ ಕರ್ತವ್ಯವಾಯಿತು.

ಈ ಕಾರಣದಿಂದ ಟ್ರೇಡ್‌ಯೂನಿಯನ್ ಚಳುವಳಿ ಅಗಾಧವಾಗಿ ಮುಂದುವರೆಯಿತು. ಆದರೂ ಕಾರ್ಮಿಕ ರಂಗದಲ್ಲಿ ಶಾಂತಿ ನೆಲೆಸಿದೆ. ಸರ್ಕಾರದ ಮಧ್ಯಪ್ರವೇಶದಿಂದ ಕಾರ್ಮಿಕರು ಅನೇಕ ಸವಲತ್ತುಗಳನ್ನು ಮಾಲೀಕರಿಂದ ಪಡೆದುಕೊಂಡಿದ್ದಾರೆ.

1976ರಲ್ಲಿ ಕೇವಲ ಶೇ. 22 ಕಾರ್ಮಿಕರು ಪ. ಬಂಗಾಳದಲ್ಲಿ ಬೋನಸ್ ಪಡೆದಿದ್ದರು. ಕಳೆದ ನಾಲ್ಕು ವರ್ಷಗಳಲ್ಲಿ ಶೇ. 90–100 ರವರೆಗೆ ಬೋನಸ್ ಪಡೆದಿದ್ದಾರೆ. ಸಾರ್ವಜನಿಕ ಉದ್ಯಮದ ಕೆಲಸಗಾರರು ಬೋನಸ್ ಕಾಯಿದೆಯ ವ್ಯಾಪ್ತಿಗೆ ಬರುವುದಿಲ್ಲ. ಹೀಗಿದ್ದೂ, ಎಡರಂಗ ಸರ್ಕಾರವು ಅವರಿಗೆ ಬೋನಸ್‌ಗೆ ಬದಲಾಗಿ ಶೇ. 8.33ರಷ್ಟು ಎಕ್ಸ್‌ಗ್ರಾಷಿಯಾ ಹಣ ಕೊಡುತ್ತಿದೆ.

ಸೆಣಬು, ಬಟ್ಟೆಗಿರಣಿಗಳ ಸಾವಿರಾರು ಕಾರ್ಮಿಕರು ಇಂದು ತಮ್ಮ ಅನೇಕ ಬೇಡಿಕೆಗಳನ್ನು ಈಡೇರಿಸಿಕೊಂಡಿದ್ದಾರೆ. ಮೂರು ಲಕ್ಷ ಎಂಜಿನಿಯರಿಂಗ್ ಕಾರ್ಮಿಕರು ಅನಿರ್ದಿಷ್ಟ ಮುಷ್ಕರ ಹೂಡಲಿದ್ದರು. ಮುದ್ರಣಾಲಯ ಮತ್ತಿತರ ಕೈಗಾರಿಕೆಗಳ ಕಾರ್ಮಿಕರು ಮುಷ್ಕರ ಹೂಡಿದ್ದರು. ರಾಜ್ಯಸರ್ಕಾರದ ಮಧ್ಯಪ್ರವೇಶದಿಂದ ಈ ಸಂಬಂಧದಲ್ಲಿ ಒಪ್ಪಂದಗಳಾಗಿವೆ. ಕಲ್ಕತ್ತ ಬಂದರು ಕಾರ್ಮಿಕರು ಮತ್ತು ಆಡಳಿತ ನಡುವಿನ ಅನೇಕ ವಿವಾದಗಳು ಎಡರಂಗ ಸರ್ಕಾರದಿಂದ ಒಪ್ಪಂದಕ್ಕೆ ಬಂದಿವೆ.

ಈ ನಾಲ್ಕು ವರ್ಷಗಳಲ್ಲಿ ಕಾರ್ಖಾನೆ ಮುಚ್ಚುವಿಕೆ, ಬೀಗಮುದ್ರೆ, ವಜಾ ಇವೆಲ್ಲವೂ ಗಮನಾರ್ಹವಾಗಿ ಕಡಿಮೆಯಾಗಿದೆ. ಮುಷ್ಕರದ ಹಕ್ಕನ್ನು ಸರ್ಕಾರ ನೀಡಿದೆ. ಆದರೆ ಬೇರೆಲ್ಲ ವಿಧಾನಗಳೂ ವಿಫಲವಾದಾಗ ಮುಷ್ಕರವನ್ನು ಪ್ರಯೋಗಿಸಬೇಕೆಂದು ಸರ್ಕಾರ ಭಾವಿಸುತ್ತದೆ, ಒಪ್ಪಂದಕ್ಕೆ ಬರಲು ಮನವೊಲಿಸುವ ವಿಧಾನ ಹೆಚ್ಚಾಗಿ ಜಾರಿಯಲ್ಲಿದೆ.

ಕೈಗಾರಿಕಾ ವಿವಾದ ಮಸೂದೆಯನ್ನು ಪ. ಬಂಗಾಳಕ್ಕೆ ಅನ್ವಯಿಸುವಂತೆ ತಿದ್ದುಪಡಿ ಮಾಡಿಕೊಳ್ಳಲು ಎಡರಂಗ ಸರ್ಕಾರ ಸಲಹೆಮಾಡಿದೆ. ಸಂಘಟಿತ ಕಾರ್ಮಿಕರು 500 ರೂ. ಇಂದ 1,600ಕ್ಕೆ ವೇತನ ಹೆಚ್ಚಳ ಪಡೆಯಬೇಕೆಂಬ ಸಲಹೆಯೂ ಅದರಲ್ಲಿದೆ.

ಪ. ಬಂಗಾಳದ ಕಾರ್ಖಾನೆ ಕೆಲಸಗಾರರ ನಿಜ ವಾರ್ಷಿಕ ವೇತನ 1976ಕ್ಕಿಂತ 1978ರಲ್ಲಿ ತುಂಬ ಹೆಚ್ಚಾಗಿದೆ. ಕಾರ್ಮಿಕರ ಸಂಘಟಿತ ಶಕ್ತಿ ಮತ್ತು ರಾಜ್ಯ ಸರ್ಕಾರದ ನೀತಿಗಳೇ ಇದಕ್ಕೆ ಕಾರಣವಾಗಿವೆ.

ಉದ್ಯೋಗ ಅವಕಾಶವೂ, ಸರ್ಕಾರದ ಯೋಜನೆಗಳಿಂದ ವ್ಯಾಪಕವಾಗಿ ಹೆಚ್ಚಾಗಿದೆ. ಗ್ರಾಮೀಣ ಯೋಜನೆಗಳಲ್ಲಿ ಜನಸಾಮಾನ್ಯರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೃಷಿ ವೇತನ ಮಟ್ಟವು ಈಗ 9ರೂ. 3 ಪೈಸೆ ಆಗಿದೆ. ಪಂಚಾಯಿತಿಗಳ ಪಾತ್ರ, ಆಡಳಿತ ವರ್ಗದ ಸಹಕಾರದಿಂದ ಗ್ರಾಮೀಣ ಯೋಜನೆಗಳು ಸಫಲವಾಗಿವೆ.

ಪ. ಬಂಗಾಳದಲ್ಲಿ ಎಲ್ಲ ಉದ್ಯೋಗಗಳನ್ನೂ ಉದ್ಯೋಗ ವಿನಿಮಯ ಕಚೇರಿಯಿಂದಲೇ ಭರ್ತಿಮಾಡಲಾಗುತ್ತದೆ. ನಿರುದ್ಯೋಗ ಭತ್ಯೆಯೂ ಜಾರಿಯಲ್ಲಿದೆ. ರಾಜ್ಯ ಸರ್ಕಾರದ ಉದ್ಯೋಗಿಗಳಿಗೆ ತುಟ್ಟಿಭತ್ಯೆಯನ್ನು ಕೇಂದ್ರ ಸರ್ಕಾರ ಕೊಡುವ ಮಟ್ಟದಲ್ಲೇ ಕೊಡಲಾಗುತ್ತಿದೆ. ಅರೆ ಸರಕಾರಿ ಕಚೇರಿಗಳ, ಸ್ಥಳೀಯ ಸ್ವಂತ ಸರ್ಕಾರಿ ಕಚೇರಿಗಳ, ಮತ್ತು ಸರ್ಕಾರದ ಧನಸಹಾಯ ಪಡೆಯುವ ಸಂಸ್ಥೆಗಳ (ಅಧ್ಯಾಪಕರೂ ಸೇರಿದಂತೆ) ಉದ್ಯೋಗಿಗಳೆಲ್ಲರೂ ಕೇಂದ್ರ ಸರಕಾರ ಕೊಡುವ ಮಟ್ಟದ ತುಟ್ಟಿಭತ್ಯವನ್ನೇ ಪಡೆಯುತ್ತಿದ್ದಾರೆ.

ದೇಶದಾದ್ಯಂತ ಹರಡಿರುವ ಬಿಕ್ಕಟ್ಟಿನ ಸಮಯದಲ್ಲೂ ವಾಮರಂಗ ಸರ್ಕಾರವು ಬಿಕ್ಕಟ್ಟನ್ನು ಯಶಸ್ವಿಯಾಗಿ ಎದುರಿಸಿದೆ. ಕೆಲವು ರಂಗಗಳಲ್ಲಿ ಆಗಿರುವ ವೈಫಲ್ಯಗಳನ್ನು ಗಮನದಲ್ಲಿಟ್ಟುಕೊಂಡರೂ ಕೂಡ, ವಾಮರಂಗ ಸರ್ಕಾರವು ಹೊಸ ಯುಗದ ನಿರ್ಮಾತೃವಾಗಿದೆ. ಕೇಂದ್ರದ ಅಸಹಕಾರ ಧೋರಣೆಯ ನಡುವೆಯೂ ಇದು ಸಾಧ್ಯವಾಗಿದೆ.

●

ಪ. ಬಂಗಾಳದಲ್ಲಿ ಕೂಲಿಗಾಗಿ ಕಾಳು ಯೋಜನೆ

-ದಿನೇಶ್ ರಾಯ್

ಕೂಲಿಗಾಗಿ ಕಾಳು ಯೋಜನೆಯು ಸಂಸತ್ತಿನ ಒಳಗೆ ಮತ್ತು ಹೊರಗೆ, ನಿಲುಗಡೆಯೇ ಇಲ್ಲದ ಚರ್ಚೆಗೆ ವಸ್ತುವಾಗಿದೆ. 1980ರ ಜನವರಿಯಿಂದ, ಆಹಾರವನ್ನು ಒಂದು ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಂಡು, ಎಡರಂಗ ಸರ್ಕಾರವನ್ನು ಉರುಳಿಸಲು ಕೇಂದ್ರವು ಯತ್ನಿಸುತ್ತಿದೆ. ಇತರ ರಾಜ್ಯಗಳ ಜನರಿಗೆ ತಪ್ಪುಮಾಹಿತಿ ನೀಡಲು, ಕೆಲವೊಮ್ಮೆ ದೋಷಪೂರ್ಣ ಅಂಕಿಅಂಶಗಳನ್ನು ಕೊಡುತ್ತಿದೆ. ಈ ಯೋಜನೆಯನ್ವಯ ಒದಗಿಸಲಾದ ಆಹಾರದ ಶೇ. 50ಕ್ಕೂ ಬಳಕೆ ಸರ್ಟಿಫಿಕೇಟನ್ನು ಸಲ್ಲಿಸಿಲ್ಲವೆಂಬ ನೆವದ ಮೇಲೆ 1980ರ ಮೇ ನಿಂದ ಈ ರಾಜ್ಯಕ್ಕೆ ಆಹಾರಧಾನ್ಯಗಳನ್ನು ಒದಗಿಸುವುದನ್ನು ನಿಲ್ಲಿಸಿದೆ. ಇದಲ್ಲದೆ, ಈ ಯೋಜನೆಯ ಜಾರಿಯನ್ನು ಉಸ್ತುವಾರಿ ಮಾಡಲು ಜಿಲ್ಲಾಮಟ್ಟದ ಮ್ಯಾಜಿಸ್ಟ್ರೇಟರ ನೇತೃತ್ವದ ಚಾಲನಾ ಸಮಿತಿಗಳನ್ನು ಪ. ಬಂಗಾಳ ಸರ್ಕಾರ ರಚಿಸಿಲ್ಲ ಎಂಬ ನೆಪವನ್ನೂ ಕೇಂದ್ರ ಒಡ್ಡಿದೆ.

ಯೋಜನೆಯ ಹಿನ್ನೆಲೆ

ಪ. ಬಂಗಾಳದ ಸರ್ಕಾರವು ಕೂಲಿಗಾಗಿ ಕಾಳು ಯೋಜನೆಯನ್ನು ಆರಂಭಿಸಿ ಮೂರು ವರ್ಷಗಳಾಗಿವೆ. ಈ ಯೋಜನೆಯನ್ನು 1977ರಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಜನತಾ ಸರಕಾರ ಪ್ರಾರಂಭಮಾಡಿತು. ಕೇಂದ್ರದ ಮಾರ್ಗದರ್ಶಕ ಸೂತ್ರಗಳ ಆಧಾರದ ಮೇಲೆ, ರಾಜ್ಯವು ಈ ಯೋಜನೆಯನ್ನು ನಡೆಸಬೇಕು, ಗ್ರಾಮೀಣ ಅಭಿವೃದ್ಧಿಯು ರಾಜ್ಯ ಸರ್ಕಾರದ ವಿಚಾರವಾದ್ದರಿಂದ ಕೇಂದ್ರವು ಮಧ್ಯೆ ತಲೆಹಾಕಬಾರದೆಂಬ ನಿರೀಕ್ಷೆ ಇತ್ತು. ಈ ಯೋಜನೆಯ ಉದ್ದೇಶಗಳು ಇಷ್ಟು – (1) ಕೃಷಿಕೆಲಸ ಇಲ್ಲದ ಸಮಯದಲ್ಲಿ ಕೃಷಿ ಕಾರ್ಮಿಕರಿಗೆ ಕೆಲಸ ಒದಗಿಸುವುದು ಮತ್ತು (2) ಸಣ್ಣ ನೀರಾವರಿ ಮುಂತಾದ ಬಹುಕಾಲ ಬಾಳುವ ಕಾರ್ಯಗಳನ್ನು ನಡೆಸಿ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.

ಈ ಕ್ಷೇತ್ರದಲ್ಲಿ ಪ. ಬಂಗಾಳದ ಎಡರಂಗ ಸರ್ಕಾರ ಮೊದಲ ವಿಜಯಿಯಾಗಿದೆ. ಈ ಪಾತ್ರವನ್ನು ಆಗಿನ ಜನತಾ ಸರ್ಕಾರವೂ ಗುರುತಿಸಿತ್ತು.

ಯೋಜನೆಯ ಪ್ರಗತಿ

1977-78, 1978-79 ಮತ್ತು 1979-80 (ಡಿಸೆಂಬರ್ 1979ರ ವರೆಗೆ)ರ ಅವಧಿಯಲ್ಲಿ ಈ ಯೋಜನೆಯು ಹೆಚ್ಚು ಅಡ್ಡಿತಡೆಗಳಿಲ್ಲದೆ ಮುಂದುವರೆಯಿತು. ಪಂಚಾಯಿತಿ ವ್ಯವಸ್ಥೆಯ ಮೂಲಕ ಗ್ರಾಮೀಣ ಜನತೆಯ ಸಹಕಾರವನ್ನು ತೆಗೆದುಕೊಂಡ ಎಡರಂಗ ಸರ್ಕಾರವು, ಕೂಲಿಗಾಗಿ ಕಾಳು ಯೋಜನೆ, ಗ್ರಾಮೀಣ ಕಾರ್ಯ ಮತ್ತು ಸಮಗ್ರ ಗ್ರಾಮೀಣ ಪುನರ್ವ್ಯವಸ್ಥೆ ಎಂಬ ಮೂರು ಯೋಜನೆಗಳನ್ನು ನಡೆಸುತ್ತಿತ್ತು.

ಈ ಯೋಜನೆಯ ಅನ್ವಯ, 1978–79ರಲ್ಲಿ ಪ. ಬಂಗಾಳವು 533.44 ಲಕ್ಷ ದುಡಿಮೆ ದಿನಗಳನ್ನು ಸೃಷ್ಟಿಸಿತ್ತು. ಆದರೆ ಕೇಂದ್ರವು 1978-79ರ ನಂತರ ಧಾನ್ಯವನ್ನು ಸರಬರಾಜು ಮಾಡಲು ನಿರಾಕರಿಸಿದ್ದರಿಂದ, ಉದ್ಯೋಗ ಸೃಷ್ಟಿಗೆ ಭಂಗ ಬಂದಿತು. ಹಾಗಿದ್ದರೂ ಕೂಡ ಈ ವಿಚಾರದಲ್ಲಿ ಎಡರಂಗ ಸರ್ಕಾರದ ಸಾಧನೆಯು ಗಮನಾರ್ಹವಾದದ್ದೇ. ಎಷ್ಟೇ ಅಡಿತಡೆಗಳಿದ್ದರೂ ಸಹ, ಕೆಲಸಗಾರರನ್ನು ನಿಯೋಜಿಸಿಕೊಳ್ಳುವ ಸಂಖ್ಯೆಯಲ್ಲಿ ಪ. ಬಂಗಾಳವು ಎಲ್ಲ ರಾಜ್ಯಗಳಿಗಿಂತ ಮುಂದಿದೆ.

ಒಂದೇ ವರ್ಷದಲ್ಲಿ, ಸಣ್ಣ ನೀರಾವರಿ ಯೋಜನೆಗೆ 45ಸಾವಿರ ಹೆಕ್ಟೇರ್ ಅಥವಾ ಒಂದು ಲಕ್ಷಕ್ಕೂ ಮಿಕ್ಕಿದ ಎಕರೆಗಳ ಜಮೀನನ್ನು ಒಳಪಡಿಸಲಾಗಿದೆ. ಬಹುಕಾಲ ಬಾಳುವ ಉತ್ಪಾದನಾ ಆಸ್ತಿಗಳ ನಿರ್ಮಾಣ ಇದೇ ಅಲ್ಲವೇನು? ದುಡಿಮೆ ದಿನಗಳ ಸೃಷ್ಟಿಯಿಂದಲೇ ಈ ಯೋಜನೆಯ ಯಶಸ್ಸನ್ನು ಅಳೆಯಲಾಗುವುದಿಲ್ಲ. ಪ್ರತಿ ಜಿಲ್ಲೆಯಲ್ಲೂ ದಿನಗೂಲಿಯ ಮಟ್ಟವು ಸರ್ಕಾರ ನಿಗದಿ ಮಾಡಿದ ಕನಿಷ್ಠ ವೇತನಕ್ಕಿಂತ ಹೆಚ್ಚು ಮಟ್ಟದಲ್ಲಿದೆ. ಈ ಸಾಧನೆಗೆ ಪ್ರತಿಯೊಬ್ಬ ಪ್ರಜೆಯೂ ಹೆಮ್ಮೆ ಪಡಬೇಕು. ಆದರೆ ಕೇಂದ್ರ ಸರ್ಕಾರವು ಪ. ಬಂಗಾಳದ ಈ ಸಾಧನೆಗೆ ಒಂದೇ ಒಂದು ಹೊಗಳುನುಡಿಯನ್ನೂ ಆಡಿಲ್ಲ.

ಬಳಕೆ ಸರ್ಟಿಫಿಕೇಟ್ ವಿವಾದ ಏನು ?

ಮಾರ್ಗದರ್ಶಕ ಸೂತ್ರಗಳನ್ನು ಅನುಸರಿಸಿಲ್ಲ, ಬಳಕೆ ಸರ್ಟಿಫಿಕೇಟ್‌ಗಳನ್ನು ಸಲ್ಲಿಸಿಲ್ಲ, ಜಿಲ್ಲಾಮಟ್ಟದ ಚಾಲನಾ ಸಮಿತಿಯನ್ನು ರಚಿಸಿಲ್ಲ ಎಂದು ಕೇಂದ್ರವು ದೂರುತ್ತಿದೆ. ಪ. ಬಂಗಾಳ ಕಾಂಗ್ರೆಸ್ ಸಲ್ಲಿಸಿದ ವರದಿಯ ಆಧಾರದ ಮೇಲೆ ಕೃಷಿಸಚಿವ ರಾವ್‌ಬೀರೇಂದ್ರಸಿಂಗ್ ಅವರು ರಾಜಕೀಯ ದುರುದ್ದೇಶದಿಂದ ಪ. ಬಂಗಾಳ ಸರ್ಕಾರವನ್ನು ದೂಷಿಸಿದ್ದಾರೆ. ಅವರ ಸಚಿವಾಲಯವು "ಸ್ಥಳದಲ್ಲೇ ಪರೀಕ್ಷೆ" ನಡೆಸಲು ಇಬ್ಬರು ಅಧಿಕಾರಿಗಳನ್ನು ಕಳುಹಿಸಿತ್ತು. ಆದರೆ ಯೋಜನೆಯಲ್ಲಿ ಭ್ರಷ್ಟಾಚಾರದ ಒಂದು ಪ್ರಸಂಗವೂ ಅವರಿಗೆ ಸಿಗಲಿಲ್ಲ. ಹಾಗಿದ್ದರೂ, ಕೆಲವೇ ಹಳ್ಳಿಗಳಿಗೆ ಭೇಟಿಯಿತ್ತ ಈ ಅಧಿಕಾರಿಗಳು ಎಷ್ಟೋ ಬೇಡವಾದ ತೀರ್ಮಾನಗಳನ್ನು ಮಾಡಿದ್ದಾರೆ.

ಕೇಂದ್ರ ಒದಗಿಸಿದ ಧಾನ್ಯಗಳ ಬಳಕೆಯ ಬಗ್ಗೆ ಪ. ಬಂಗಾಳದ ನಿಲು

(7ನೇ ಪುಟ ನೋಡಿ)

ಶಿಕ್ಷಣ ರಂಗದಲ್ಲಿ ಜನಪರ ಶಿಕ್ಷಣ ವ್ಯವಸ್ಥೆಯತ್ತ ಮುನ್ನಡೆ

ಒಂದು ಸರಕಾರ ನಿಜವಾಗಿಯೂ ಜನಸಾಮಾನ್ಯರ ಒಳಿತಿನ ಬಗ್ಗೆ ತೀವ್ರ ಕಾಳಜಿ ಹೊಂದಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸುವ ಒಂದು ವಿಧಾನ-ಶಿಕ್ಷಣರಂಗಕ್ಕೆ ಸಂಬಂಧಿಸಿದಂತೆ ಅದರ ಧೋರಣೆಗಳನ್ನು, ಕಾರ್ಯಕ್ರಮಗಳನ್ನು ಹಾಗೂ ಸಾಧನೆಗಳನ್ನು ಪರಿಶೀಲಿಸುವುದು. ಶಿಕ್ಷಣ ರಂಗದಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ನಾಲ್ಕು ವರ್ಷದ ಸಾಧನೆಗಳೇನು? ಶಿಕ್ಷಣರಂಗದಲ್ಲಿ ತಂದ ಬದಲಾವಣೆಗಳೇನು?

ಜ್ಯೋತಿಬಸುರವರ ನೇತೃತ್ವದ ಎಡರಂಗದ ಸರ್ಕಾರ 1977ರಲ್ಲಿ ಅಧಿಕಾರ ವಹಿಸಿಕೊಂಡ ಮೇಲೆ ಶಿಕ್ಷಣ ರಂಗದಲ್ಲಿ ಅದರ ಮೊದಲನೇ ಹಾಗೂ ಪ್ರಮುಖ ಸಾಧನೆಯೆಂದರೆ ಶಾಲಾ-ಕಾಲೇಜುಗಳಲ್ಲಿ ಪರಿಸ್ಥಿತಿಯನ್ನು ಸಾಮಾನ್ಯಗೊಳಿಸಿದ್ದು. ಮೊದಲ ನೋಟಕ್ಕೆ ಇದು ಅಷ್ಟೊಂದು ಮಹತ್ವದ ಸಾಧನೆಯೇ ಎಂದೆನಿಸಬಹುದು. ಆದರೆ 1977ರ ಮೊದಲು ಪಶ್ಚಿಮ ಬಂಗಾಲದ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕವಾಗಿ ಹರಡಿದ್ದ ತೀವ್ರ ಅಸ್ತವ್ಯಸ್ತತೆಯನ್ನು ತಿಳಿದವರು ಇದು ನಿಜವಾಗಿಯೂ ಅತೀ ಪ್ರಮುಖವಾದ ಸಾಧನೆಯೆಂದು ಒಪ್ಪುತ್ತಾರೆ. ಶಾಲಾ-ಕಾಲೇಜುಗಳಲ್ಲಿ ತೀವ್ರ ಅಶಿಸ್ತು ಹರಡಿತ್ತು. ಪರೀಕ್ಷೆಗಳು ಸಮಯಕ್ಕೆ ಸರಿಯಾಗಿ ನಡೆಯುತ್ತಿರಲಿಲ್ಲ. ಫಲಿತಾಂಶಗಳೂ ನಿಯತ ಅವಧಿಯೊಳಗೆ ಪ್ರಕಟವಾಗುತ್ತಿರಲಿಲ್ಲ. ಪರೀಕ್ಷೆಗಳಲ್ಲಿ ಸಾಮೂಹಿಕವಾಗಿ ಕಾಪಿಹೊಡೆಯುವುದು ಸರ್ವೇಸಾಮಾನ್ಯವಾಗಿತ್ತು. ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಅಶಿಸ್ತು, ಗಲಾಟೆ, ಕಾಪಿ ಹೊಡೆಯುವುದು ಹಳೆಯ ವಿಷಯಗಳಾಗಿಬಿಟ್ಟಿವೆ.

ಉಚಿತ ಶಿಕ್ಷಣ

ದುರ್ಬಲವರ್ಗದ ಹಾಗೂ ಕೆಳ ಮತ್ತು ಮಧ್ಯಮ ವರಮಾನದ ಜನ ತಮ್ಮ ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಡಿಸಿ ತನ್ಮೂಲಕ ಸಮಾಜದಲ್ಲಿ ಶಿಕ್ಷಣ ಹರಡಬೇಕಾದರೆ ಅದು ಉಚಿತವಾಗಿರಬೇಕಾದ್ದು ಅವಶ್ಯಕ. ಈ ದಿಕ್ಕಿನಲ್ಲಿ ಎಡರಂಗ ಸರ್ಕಾರ ಹಂತ-ಹಂತವಾದ, ಸುಯೋಜಿತ ಹಾಗೂ ಅವಿರತ ಪ್ರಯತ್ನ ನಡೆಸಿದೆ. ಅದರ ಫಲವಾಗಿ 1977ರಲ್ಲಿ ಹುಡುಗರಿಗೆ 4ನೇ ತರಗತಿಯವರೆಗೆ, ಹುಡುಗಿಯರಿಗೆ 8ನೇ ತರಗತಿಯವರೆಗೆ ಉಚಿತ ಶಿಕ್ಷಣ ದೊರೆಯುತ್ತಿದ್ದರೆ, 1979ರ ಹೊತ್ತಿಗೆ 8ನೇ ತರಗತಿಯವರೆಗೆ ಎಲ್ಲರಿಗೂ ಉಚಿತ ಶಿಕ್ಷಣ, 1980ರಲ್ಲಿ ಹತ್ತನೇ ತರಗತಿಯವರೆಗೆ ಹಾಗೂ ಈ ವರ್ಷ 12ನೇ ತರಗತಿಯವರೆಗೆ ಶಿಕ್ಷಣವನ್ನು ಉಚಿತಗೊಳಿಸಲಾಗಿದೆ.

ಶಿಕ್ಷಣವನ್ನು ಉಚಿತಗೊಳಿಸಿದ್ದು ಮಾತ್ರವಲ್ಲ ಹೆಚ್ಚೆಚ್ಚು ಶಾಲೆಗಳನ್ನು ಸ್ಥಾಪಿಸಲಾಗಿದೆ ಹಾಗೂ ಕೆಳವರ್ಗದ ಜನರಿಗೆ ಪಠ್ಯಪುಸ್ತಕ, ಉಚಿತ ಆಹಾರ ಇತ್ಯಾದಿಯನ್ನೂ ವ್ಯವಸ್ಥೆಮಾಡಲಾಗಿದೆ. ಪರಿಣಾಮವಾಗಿ 6ರಿಂದ 11 ವರ್ಷ ವಯಸ್ಸಿನ 16·77 ಲಕ್ಷ ಮಕ್ಕಳು 1984-85ರ ಹೊತ್ತಿಗೆ ಹೊಸದಾಗಿ ಶಾಲೆಗೆ ಸೇರುವರೆಂದು ಅಂದಾಜುಮಾಡಲಾಗಿದೆ. ಅಂದರೆ 1977-78ರಲ್ಲಿ ಈ ವಯೋಗುಂಪಿನ 84% ಮಕ್ಕಳು ಶಾಲೆಗಳಿಗೆ ಭರ್ತಿಯಾಗಿದ್ದರೆ 1984-85ರ ಸುಮಾರಿಗೆ 100% ಅಂದರೆ ಎಲ್ಲರೂ ಶಿಕ್ಷಣ ಪಡೆಯುವಂತಾಗುತ್ತದೆ.

ಅನಕ್ಷರಸ್ತರು ಬಹಳ ಸಂಖ್ಯೆಯಲ್ಲಿರುವ ನಮ್ಮಂತಹ ದೇಶಗಳಲ್ಲಿ ಸಾಕ್ಷರತೆ ಹರಡುವಂತೆ ಮಾಡುವುದು ಅತೀ ಅಗತ್ಯ. ಖಾಸಗೀ ಒಡೆತನದ ಶಾಲೆಗಳ ಮೂಲಕ ಇದನ್ನು ಮಾಡಲಾಗುವುದಿಲ್ಲ. ಯಾಕೆಂದರೆ ಶಿಕ್ಷಣವನ್ನು ಕೇವಲ ಒಂದು ದುಡ್ಡಿನ ವ್ಯವಹಾರವೆಂದು ಪರಿಗಣಿಸುವ ಖಾಸಗಿಯವರು ಸಾಮೂಹಿಕ ಶಿಕ್ಷಣದ ಬಗ್ಗೆ ಕಾಳಜಿವಹಿಸುವುದಿಲ್ಲ. ಆದ್ದರಿಂದ ಕನಿಷ್ಟ ಮಾಧ್ಯಮಿಕ ಹಂತದ ವರೆಗಾದರೂ ಇದರ ಜವಾಬ್ದಾರಿಯನ್ನು ಸರಕಾರವೇ ವಹಿಸಿಕೊಳ್ಳಬೇಕು. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಇದನ್ನರಿತು ತನ್ನ ಜವಾಬ್ದಾರಿ ನಿರ್ವಹಿಸಲು ತೀವ್ರ ಪ್ರಯತ್ನ ನಡೆಸಿದೆ. ಕೆಲವು ಅಂಕಿ-ಸಂಖ್ಯೆಗಳನ್ನು ಗಮನಿಸಬಹುದು.

4600 ಹೊಸ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲಾಗಿದೆ. ಶಾಲೆಗಳಿಲ್ಲದ ಒಂದು ಹಳ್ಳಿಯೂ ಪಶ್ಚಿಮ ಬಂಗಾಳದಲ್ಲಿರಬಾರದೆಂಬುದು ಎಡರಂಗ ಸರ್ಕಾರದ ಗುರಿ. ಹರಕು-ಮುರುಕು ಗುಡಾರಗಳಲ್ಲಿ ಸರಿಯಾದ ವ್ಯವಸ್ಥೆಯಿಲ್ಲದೆ ಕಾರ್ಯನಿರ್ವಹಿಸಬೇಕಾಗುವುದು ಭಾರತದ ಹಳ್ಳಿಯ ಶಾಲೆಗಳ ಮಟ್ಟಿಗೆ ಸರ್ವೇಸಾಮಾನ್ಯ. ಎಡರಂಗ ಸರ್ಕಾರ ಇದನ್ನು ನಿವಾರಿಸಲು ಇದುವರೆಗೆ 4000 ಹೊಸ ಶಾಲಾಕಟ್ಟಡಗಳನ್ನು ನಿರ್ಮಿಸಿದೆ. 13,800 ಹೊಸ ಪ್ರಾಥಮಿಕ ಅಧ್ಯಾಪಕರನ್ನು ನೇಮಿಸಲಾಗಿದೆ. ಈ ಮೂಲಕ ಏಕೋಪಾಧ್ಯಾಯ ಶಾಲೆಗಳ ಬವಣೆ ಕಮ್ಮಿಯಾಗಿದೆ. ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣರಂಗದಲ್ಲೂ ಇದೇ ರೀತಿಯ ಸುಧಾರಣೆಗಳನ್ನು ಜಾರಿಗೊಳಿಸಲಾಗಿದೆ. ಸಿಬ್ಬಂದಿಯ ವೇತನವೂ ಕೂಡಿದಂತೆ ಎಲ್ಲಾ ಖರ್ಚನ್ನು ಸರಕಾರವೇ ವಹಿಸಿರುವ 2500 ಹೊಸ ಗ್ರಂಥಾಲಯಗಳನ್ನು ತೆರೆಯಲಾಗಿದೆ. ವಿಶ್ವವಿದ್ಯಾನಿಲಯಗಳನ್ನು ಹೆಚ್ಚು ಪ್ರಜಾಸತ್ತಾತ್ಮಕವಾಗಿರುವಂತೆ ಪುನರ್ವ್ಯವಸ್ಥೆಗೊಳಿಸಲಾಗಿದೆ. ಎಲ್ಲಾ ಅಧ್ಯಾಪಕರ ಹಾಗೂ ವಿದ್ಯಾಲಯಗಳಲ್ಲಿನ ಬೋಧಕೇತರ ಸಿಬ್ಬಂದಿಯ ವೇತನದಲ್ಲಿ ಹೆಚ್ಚಳವಾಗಿದೆ. ಪೇ ಪ್ಯಾಕೆಟ್ ಯೋಜನೆ, ಸೇವಾ ಭದ್ರತೆ ಕಾಯ್ದೆ ಹಾಗೂ ಕಾಲೇಜು ಸೇವಾ ಆಯೋಗದ ಮೂಲಕ ಅಧ್ಯಾಪಕರ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅನೌಪಚಾರಿಕ ಶಿಕ್ಷಣ ಹಾಗೂ ವಯಸ್ಕ ಶಿಕ್ಷಣ

ಸಾಮೂಹಿಕ ಶಿಕ್ಷಣದ ಗುರಿ ಸಂಪೂರ್ಣವಾಗಿ ಸಾಧನೆಯಾಗಬೇಕಾದರೆ ವಿವಿಧ ಕಾರಣಗಳಿಗಾಗಿ ಶಾಲೆಗೆ ಹೋಗಲಾರದ ಮತ್ತು ಶಾಲೆಯಿಂದ ನಡುವೆಯೇ ಹೊರಬಿದ್ದ ವಿವಿಧ ವಯೋಗುಂಪಿನವರಿಗೆ ಸಾಕ್ಷರತೆಯನ್ನು ಹಾಗೂ ಜೀವನೋಪಯೋಗಿಯಾದ ನಿಪುಣತೆಗೆ ತರಬೇತುಕೊಡುವ ಮೂಲಕ ಅವರು ತಮ್ಮ ಪರಿಸರವನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಂಡು ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸುವಂತೆ ಅನುವು ಮಾಡಿಕೊಡುವ ಅನೌಪಚಾರಿಕ ಹಾಗೂ ವಯಸ್ಕ ಶಿಕ್ಷಣ ಕಡೆಗೆ ಗಮನಹರಿಸುವುದು ಅತ್ಯಗತ್ಯ. ಈ ಕ್ಷೇತ್ರದಲ್ಲೂ ಎಡರಂಗದ ಸಾಧನೆಗಳು ಹಲವು. ಬೇರೆ ಬೇರೆ ವಯೋಗುಂಪಿನವರಿಗೆ ಬೇರೆ ಬೇರೆ ರೀತಿಯ ಸುಮಾರು 6000 ಅನೌಪಚಾರಿಕ ಶಿಕ್ಷಣ ಕೇಂದ್ರಗಳು, ಒಟ್ಟು 19 ಗ್ರಾಮೀಣ ವೃತ್ತಿಪೂರಕ ಸಾಕ್ಷರತಾ ಯೋಜನೆಗಳು, 480 ರೈತರ ವೃತ್ತಿಪೂರಕ ಸಾಕ್ಷರತಾ ಕೇಂದ್ರಗಳು ಇತ್ಯಾದಿಗಳನ್ನು ಸ್ಥಾಪಿಸಲಾಗಿದೆ.

ಭಾಷಾ ಧೋರಣೆ

ಪ್ರಾಥಮಿಕ ಹಂತದ ಶಿಕ್ಷಣ ಮಾಧ್ಯಮ ಮಾತೃಭಾಷೆಯಾಗಿರಬೇಕೇ ಅಥವಾ ಬ್ರಿಟಿಶ್ ವಸಾಹತುಶಾಹಿಗಳು ನಮ್ಮ ಮೇಲೆ ಹೇರಿದ ಇಂಗ್ಲೀಷ್ ಭಾಷೆಯಲ್ಲಿರಬೇಕೇ? ಒಂದು ಸ್ವತಂತ್ರ ದೇಶದ ಸ್ವಾಭಿಮಾನೀ, ದೇಶ ಪ್ರೇಮೀ ನಾಗರಿಕನಿಗೆ ಮಾತ್ರವಲ್ಲ ಜನಸಾಮಾನ್ಯರ ಒಳಿತಿನ ಬಗ್ಗೆ ಪ್ರಾಮಾಣಿಕ ಕಾಳಜಿ ಹೊಂದಿರುವ ಯಾರಿಗೇ ಆಗಲಿ ಇದು ಮೂರು ದಶಕಗಳ ಹಿಂದೇನೇ ಇತ್ಯರ್ಥವಾದ ಪ್ರಶ್ನೆ. ಆದರೆ ಸ್ವದೇಶ ನಿಷ್ಠೆಯ ಜನಾಂಗರಾಗದ ಡಂಗುರ ಹೊಡಿಸಿಕೊಳ್ಳುವ ಪ್ರಧಾನಮಂತ್ರಿಯೂ ಸೇರಿದಂತೆ ಹಲವರಿಗೆ ಮತ್ತು ಗುತ್ತೇದಾರಿ ಪತ್ರಿಕೆಗಳವರಿಗೆ ಇದೀಗ ಮತ್ತೆ ಪ್ರಶ್ನೆಯಾಗಿಬಿಟ್ಟಿದೆ. ಪಶ್ಚಿಮ ಬಂಗಾಳದ ಎಡರಂಗ ಸರಕಾರ ಪ್ರಾಥಮಿಕ ಹಂತದಲ್ಲಿ ಇಂಗ್ಲೀಷನ್ನು ಕಡ್ಡಾಯವಾಗಿ ಬೋಧಿಸುವುದನ್ನು ನಿಲ್ಲಿಸಿ ಈ ಹಂತದಲ್ಲಿ ಕೇವಲ ಮಾತೃಭಾಷೆಯನ್ನು ಕಲಿಸಬೇಕೆಂದು ವಿಧಿಸಿದಾಗ ಇವರೆಲ್ಲಾ ಶಿಕ್ಷಣದ ಮಟ್ಟ ಇಳಿಯುತ್ತದೆಯೆಂದು ಬೊಬ್ಬಿಟ್ಟರು. ಈ ಮೂಲಕ ಅವರ ನಿಜಸ್ವರೂಪ ಬಯಲಾಗಿದೆಯಷ್ಟೆ. ಜನಸಾಮಾನ್ಯರ ನಡುವೆ ಶಿಕ್ಷಣವನ್ನು ಹರಡಿಸಿ ರಾಷ್ಟ್ರೀಯ ಶಿಕ್ಷಣದ ಮಟ್ಟವನ್ನು ಎತ್ತರಿಸಬೇಕಾದರೆ ಪ್ರಾಥಮಿಕ ಹಂತದಲ್ಲಿ ಕೇವಲ ಮಾತೃಭಾಷೆಯನ್ನು ಅಧ್ಯಯನ ಮಾಡುವುದು ಮಾತ್ರ ಫಲದಾಯಕ ಎಂದು ವಿವಿಧ ದೇಶಗಳ ಅನುಭವದ ಪರಿಜ್ಞಾನವಿರುವ ಎಡರಂಗ ಸರಕಾರ ಪ್ರಾಥಮಿಕ ಹಂತದಲ್ಲಿ ಕಡ್ಡಾಯ ಇಂಗ್ಲೀಷನ್ನು ರದ್ದುಗೊಳಿಸಿ ಮಾತೃಭಾಷೆಯನ್ನು ಮಾತ್ರ ಕಲಿಸಬೇಕೆಂಬ ಧೋರಣೆಯನ್ನು ತಳೆದಿದೆ. ಇದರರ್ಥ ಇಂಗ್ಲೀಷನ್ನು ಸಂಪೂರ್ಣ ಹೊರಹಾಕಲಾಗಿದೆಯೆಂದಲ್ಲ. 6 ರಿಂದ 12ನೇ ತರಗತಿಯವರೆಗೆ ಅದು ಕಡ್ಡಾಯ ದ್ವಿತೀಯ ಭಾಷೆಯಾಗಿರುತ್ತದೆ.

“ಸಹಜಪಥ”ದ ವಿವಾದ

ಎಡರಂಗ ಸರ್ಕಾರ ಶಿಕ್ಷಣ ಹಾಗೂ ಇತರ ರಂಗಗಳಲ್ಲಿ ಜನಪರವಾದ ಧೋರಣೆಗಳನ್ನು ಜಾರಿಗೊಳಿಸಿ ಜನಪ್ರಿಯತೆಗಳಿಸುವುದನ್ನು ಸಹಿಸದ ಕೆಲವು ರಾಜಕೀಯ ದುರುದ್ದೇಶಪೂರಿತ ವ್ಯಕ್ತಿಗಳು ಹೊಸ ಪ್ರಾಥಮಿಕ ಪಠ್ಯ ಪುಸ್ತಕವೊಂದರ ಬಗ್ಗೆ ಅರ್ಥಹೀನ ವಿವಾದವನ್ನೆಬ್ಬಿಸಿ ದೇಶದ ಇತರೆಡೆ ಅಪಪ್ರಚಾರ ನಡೆಸುವ ಇನ್ನೊಂದು ಪ್ರಯತ್ನ ಮಾಡಿದರು. ದೇಶ ಸ್ವತಂತ್ರವಾದಂದಿನಿಂದ ಹಲವು ಶಿಕ್ಷಣ ಆಯೋಗಗಳು ಹಾಗೂ ಸಮಿತಿಗಳು ಪ್ರಾಥಮಿಕ ಶಿಕ್ಷಣವನ್ನು ಆಧುನಿಕಗೊಳಿಸಿ, ಪಠ್ಯಕ್ರಮವನ್ನು ಪುನರ್ರಚಿಸಬೇಕೆಂದು ಸಲಹೆಕೊಟ್ಟಿವೆ. ಈ ಪ್ರಕಾರವೇ ಮಗು ಬದಲಾಗುತ್ತಿರುವ ತನ್ನ ಪರಿಸರದೊಂದಿಗೆ ಸಂಬಂಧ ಜೋಡಿಸಿಕೊಂಡು ಅಭಿವ್ಯಕ್ತಗೊಳಿಸಲು, ಭಾಷೆಕಲಿಕೆಯ ಪ್ರಕ್ರಿಯೆಗೆ ಸಹಾಯಕವಾಗುವಂತೆ ವೈಜ್ಞಾನಿಕವಾಗಿ ಬಂಗಾಲಿ ಭಾಷೆಯಲ್ಲಿ ರೂಪಿಸಿದ ಹೊಸ ಪ್ರಾಥಮಿಕ ಪಠ್ಯಪುಸ್ತಕವನ್ನು ಎಡರಂಗ ಸರ್ಕಾರ ಉಪಯೋಗಕ್ಕೆ ತಂದಿತು. ಇದರ ಮೊದಲು ರವೀಂದ್ರರು ರಚಿಸಿದ “ಸಹಜ ಪಥ” ಎಂಬ ಒಂದು ಪಠ್ಯಪುಸ್ತಕ ಮಾತ್ರವಿತ್ತು. ಎಡರಂಗ ಸರ್ಕಾರದ ವಿರೋಧಿಗಳು ಈ “ಸಹಜ ಪಥ”ವನ್ನು ರದ್ದುಗೊಳಿಸಲಾಗಿದೆಯೆಂದು ಬೇಕೆಂದೇ ಅಪಪ್ರಚಾರ ನಡೆಸಿದರು. ವಾಸ್ತವ ವಿಷಯವೆಂದರೆ ಪ್ರಾಥಮಿಕ ಹಂತದಲ್ಲಿರುವ ಮಗುವಿನ ಒಂದು ಶೈಕ್ಷಣಿಕ ಅವಶ್ಯಕತೆಯ ಪೂರೈಕೆಗಾಗಿ ರವೀಂದ್ರರ “ಸಹಜ ಪಥ”ದೊಂದಿಗೆ ಇನ್ನೊಂದು ಪಠ್ಯಪುಸ್ತಕವನ್ನು ಉಪಯೋಗಕ್ಕೆ ತರಲಾಗಿದೆ. ಆದರೆ ತಮ್ಮ ಅಧಿಕಾರಾವಧಿಯಲ್ಲಿ ಪೊಳ್ಳು ಘೋಷಣೆಗಳನ್ನು ಕೊಟ್ಟು ವಾಸ್ತವದಲ್ಲಿ ಭೂಮಾಲಕ-ಬಂಡವಾಳಶಾಹಿಗಳ ಅಭಿವೃದ್ಧಿಗೆ ತಮ್ಮನ್ನರ್ಪಿಸಿಕೊಂಡಿದ್ದವರಿಗೆ ತಮ್ಮ ಮೂರು ದಶಕದ ಮೋಸ ಜನಸಾಮಾನ್ಯರೆದುರು ಬಯಲಾಗುತ್ತಿರುವಾಗ ಸತ್ಯ, ತರ್ಕ ಇತ್ಯಾದಿ ಬೇಡವೆನಿಸಿದ್ದರೆ ಆಶ್ಚರ್ಯವಿಲ್ಲ. ಆದ್ದರಿಂದಲೇ ಈ ಅಪಪ್ರಚಾರ.

1960ರೊಳಗೆ 8ನೇ ತರಗತಿಯವರೆಗೆ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಬೇಕೆಂದು ನಮ್ಮ ಸಂವಿಧಾನ ನಿರ್ದೇಶಿಸುತ್ತದೆ. ಆದರೆ ಈಗಲೂ ಎಂಟನೇ ತರಗತಿ ತಲುಪುವ ಹೊತ್ತಿಗೆ 77% ಮಕ್ಕಳು ಶಾಲೆ ಬಿಟ್ಟಿರುತ್ತಾರೆ ಎಂದು ಅಖಿಲ ಭಾರತ ಅಧಿಕೃತ ಅಂಕಿ-ಸಂಖ್ಯೆ ತಿಳಿಸುತ್ತದೆ. ಇನ್ನೂ 16 ಲಕ್ಷ ಕ್ಲಾಸ್‌ರೂಂಗಳ ಅವಶ್ಯಕತೆಯಿದೆ; 40%ದಷ್ಟು ಪ್ರಾಥಮಿಕ ಶಾಲೆಗಳು ಸರಿಯಾದ ಕಟ್ಟಡ ಹೊಂದಿಲ್ಲ; ಒಂದೂವರೆ ಲಕ್ಷ ಶಾಲೆಗಳಲ್ಲಿ ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲ; 35% ಪ್ರಾಥಮಿಕ ಶಾಲೆಗಳಿಗೆ ಕೇವಲ ಒಬ್ಬರೇ ಉಪಾಧ್ಯಾಯರಿರುವುದು. ಶಿಕ್ಷಣರಂಗ ಈ ಅವಸ್ಥೆಯಲ್ಲಿದ್ದರೂ ನಮ್ಮ ಪ್ರಧಾನ ಮಂತ್ರಿಗಳಿಗೆ ಇದನ್ನು ಸುಧಾರಿಸಬೇಕೆಂಬ ಬಗ್ಗೆ ಆಸಕ್ತಿಯಿಲ್ಲ. ಇತ್ತೀಚಿಗೆ ಶಿಕ್ಷಣ ಮಂತ್ರಿಗಳ ಸಮ್ಮೇಳನದಲ್ಲಿ “ನಮ್ಮ ನ್ಯೂನತೆಗಳ ಬಗ್ಗೆ ಆಲಾಪಬೇಡ”, “ನಮ್ಮನ್ನು ಹಳಿದುಕೊಳ್ಳುವುದು ಬೇಡ” ಎಂದಿತ್ಯಾಗಿ ಹೇಳಿ ಸಮಸ್ಯೆಯ ಗಂಭೀರತೆಯನ್ನು ಹಗುರವಾಗಿ ಕಾಣುವ ಪ್ರಯತ್ನ ನಡೆಸಿದ್ದಾರೆ. ಅವರ ಪಕ್ಷದ ಭದ್ರಕೋಟೆಗಳೆನಿಸಿದ ಕರ್ನಾಟಕದಲ್ಲಿ 19 ಹಾಗೂ ಆಂಧ್ರಪ್ರದೇಶದಲ್ಲಿ 6 ಹೊಸ ಖಾಸಗೀ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಸರಕಾರದ ಪ್ರೋತ್ಸಾಹದೊಂದಿಗೆ ಕಳೆದೆರಡು ವರ್ಷಗಳಲ್ಲಿ ತೆರೆಯಲಾಗಿದೆ. ಈ ಎಲ್ಲಾ ಕಾಲೇಜುಗಳಲ್ಲಿ ಪ್ರವೇಶ ದೊರೆಯಬೇಕಾದರೆ ಸಾವಿರಾರು ರೂಪಾಯಿ ಕ್ಯಾಪಿಟೇಶನ್ ಫೀ ತೆರಬೇಕು. ಇವು ಯಾರ ಉಪಯೋಗಕ್ಕಾಗಿ ಎಂದು ಬೇರೆ ಹೇಳಬೇಕೆ? ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ದೇಶ ಸ್ವತಂತ್ರವಾದ ನಂತರ ಮೊದಲ ಬಾರಿಗೆ ಸಾಂಪ್ರದಾಯಿಕ ವಸಾಹತುಶಾಹೀ ಶಿಕ್ಷಣ ವ್ಯವಸ್ಥೆಯನ್ನು ಜನಸಾಮಾನ್ಯರ ಶಿಕ್ಷಣ ವ್ಯವಸ್ಥೆಯನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದೆ ಮತ್ತು ಇದು ಕಾಂಗ್ರೆಸ್ (ಐ) ಹಾಗೂ ಇತರ ಆಳುವ ವರ್ಗಗಳ ಪಕ್ಷಗಳ ಜನವಿರೋಧೀ ಧೋರಣೆಗಳ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿದೆ ಎಂದು ಧಾರಾಳವಾಗಿ ಹೇಳಬಹುದು.

○

ಗ್ರಾಮೀಣ ಕ್ಷೇತ್ರದಲ್ಲಿ ಚಾಲನೆ ಆರಂಭಿಸಿರುವ

ಎಡರಂಗ ಸರ್ಕಾರದ ಭೂಸುಧಾರಣಾ ಕ್ರಮಗಳು

ಗ್ರಾಮಾಂತರ ಕ್ಷೇತ್ರದಲ್ಲಿನ ಪಾಳೆಯಗಾರೀ ಹಾಗೂ ಅರೆಪಾಳೆಯಗಾರೀ ಕೃಷಿಸಂಬಂಧಗಳನ್ನು ನಿರ್ಮೂಲನ ಮಾಡುವುದು ಅಥವಾ ರೈತ ಕ್ರಾಂತಿಯನ್ನು ನಡೆಸುವುದು ಪಶ್ಚಿಮ ಬಂಗಾಲದ ಎಡರಂಗ ಸರ್ಕಾರದ ಗುರಿಯಲ್ಲ. ಯಾಕೆಂದರೆ ಸದ್ಯದ ಸಂವಿಧಾನದ ಚೌಕಟ್ಟಿನೊಳಗೆ, ಅದೂ ಒಂದು ರಾಜ್ಯಸರ್ಕಾರ ಹೊಂದಿರುವ ಸೀಮಿತ ಅಧಿಕಾರವನ್ನುಪಯೋಗಿಸಿ ಅದನ್ನು ಸಾಧಿಸುವುದು ಸಾಧ್ಯವಿಲ್ಲ. ಎಡರಂಗ ಸರ್ಕಾರ ಗ್ರಾಮೀಣ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೇಗೆ ಕಾರ್ಯನಿರ್ವಹಿಸಿತು ಎಂದು ವಸ್ತುನಿಷ್ಠವಾಗಿ ಪರಿಶೀಲಿಸುವಾಗ ಈ ಮುಖ್ಯ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹಾಗಿದ್ದರೆ ಏಕೆ ಅಧಿಕಾರಕ್ಕೆ ಬರಬೇಕು ಎಂಬ ಅರಾಜಕತಾವಾದೀ ಮೂರ್ಖ ಪ್ರಶ್ನೆಯನ್ನು ಬದಿಗಿಟ್ಟು ರೈತರ ವಿವಿಧ ವಿಭಾಗಗಳ ಸಂಘಟನೆಯಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವರ್ಗ ಶತ್ರುಗಳನ್ನು ಬೇರ್ಪಡಿಸುವುದರಲ್ಲಿ ಎಡರಂಗ ಸರ್ಕಾರ ಏನು ಸಾಧಿಸಿದೆಯೆಂದು ಪರಿಶೀಲಿಸೋಣ.

ಕೃಷಿಕಾರ್ಮಿಕರು– “ನಮ್ಮದೇ ಸರಕಾರ”

ಎಡರಂಗ ಸರ್ಕಾರ ಕೈಗೊಂಡ ಕ್ರಮಗಳನ್ನು ಅಧ್ಯಯನ ಮಾಡುವಾಗ ಕೃಷಿಕಾರ್ಮಿಕರು, ಬಾರ್ಗಾದಾರರು, ಸಣ್ಣ ಹಾಗೂ ಮಧ್ಯಮ ರೈತರು ಹಾಗೂ ಶ್ರೀಮಂತ ರೈತರು ಹೀಗೆ ವಿವಿಧ ವಿಭಾಗಗಳಿಗೆ ಸಂಬಂಧಪಟ್ಟಂತೆ ಹೇಗೆ ಕಾರ್ಯನಿರ್ವಹಿಸಿತು ಎಂದು ವಿಂಗಡಣೆ ಮಾಡಬಹುದು.

ಕೃಷಿಕಾರ್ಮಿಕರ ತಕ್ಷಣದ ಸಮಸ್ಯೆಗಳು:- 1. ಕನಿಷ್ಠ ಕೂಲಿ 2. ಕೃಷಿಕೆಲಸವಿಲ್ಲದ ತಿಂಗಳುಗಳಲ್ಲಿ “ಕೆಲಸಕ್ಕಾಗಿ ಧಾನ್ಯ” ಯೋಜನೆಯ ಪ್ರಕಾರ ಕೆಲಸ. ಕನಿಷ್ಠ ಕೂಲಿಯ ಕಾನೂನನ್ನು ಜಾರಿಗೊಳಿಸಲು ಆಡಳಿತಾತ್ಮಕ ಕ್ರಮವನ್ನು ಎಡರಂಗ ಸರ್ಕಾರ ಕೈಗೊಂಡಿತು. ಇದರೊಂದಿಗೇ ಕೃಷಿಕಾರ್ಮಿಕರ ಚಳುವಳಿಗಳು ನಡೆದು ಹೆಚ್ಚಿನ ಕಡೆ 8ರೂ. 10 ಪೈಸೆ ಸಿಗುವಂತಾಯಿತು. ಈಗ ಅದನ್ನು ರೂ. 9-58ಕ್ಕೇರಿಸಲಾಗಿದೆ. “ಕೆಲಸಕ್ಕಾಗಿ ಧಾನ್ಯ” ಯೋಜನೆಯನ್ನು ಚುನಾಯಿತ ಪಂಚಾಯತುಗಳ ಮೂಲಕ ಜಾರಿಗೊಳಿಸಿದಾಗ ವರ್ಷಕ್ಕೆ 15 ಕೋಟಿ ಕೆಲಸದ ದಿನಗಳಷ್ಟು ಉದ್ಯೋಗಾವಕಾಶ ಉಂಟಾಗಿ ಕೃಷಿಕಾರ್ಮಿಕರ ಶತಮಾನಗಳ ಕಾಲದ ದಾಸ್ಯದಿಂದ ಮುಕ್ತಿ ದೊರೆತಂತಾಯಿತು ಹಾಗೂ ಆರ್ಥಿಕ ಸ್ಥಿತಿ ಸ್ವಲ್ಪ ಸುಧಾರಿಸಿತು. ಆದ್ದರಿಂದ ಎಡರಂಗ ಸರ್ಕಾರ ತಮ್ಮದೇ ಸರ್ಕಾರ ಎಂಬ ಭಾವನೆ ದಿನೇದಿನೇ ಕೃಷಿಕಾರ್ಮಿಕರಲ್ಲಿ ಬೆಳೆಯುತ್ತಿದೆ.

ಗೇಣಿದಾರರು– ಗಟ್ಟಿ ಬೆಂಬಲಿಗರು

ಗೇಣಿದಾರರು ಅಥವಾ ಬಾರ್ಗಾದಾರರ ಪ್ರಮುಖ ಸಮಸ್ಯೆಗಳು : 1. ಒಕ್ಕಲೆಬ್ಬಿಸುವುದು 2. ಹಕ್ಕುಗಳ ರಕ್ಷಣೆ 3. ಸಾಲದ ಹೊರೆಯಿಂದ ಮುಕ್ತಿ. ಒಕ್ಕಲೆಬ್ಬಿಸುವುದನ್ನು ತಡೆಯಲು ಎಡರಂಗ ಸರ್ಕಾರ ಭೂಸುಧಾರಣೆಯಲ್ಲಿ ಕೆಲವು ತಿದ್ದುಪಡಿಗಳನ್ನು ತಂದಿತು. ಒಕ್ಕಲೆಬ್ಬಿಸುವ ಸಾಮಾನ್ಯ ರೀತಿಯೆಂದರೆ “ಸ್ವಂತ ವ್ಯವಸಾಯ”ದ ನೆವಹೇಳುವುದು. ಇಂತಹ ಸಂದರ್ಭದಲ್ಲಿ 1. ಆ ಜಮೀನು ತನ್ನ ಏಕಮಾತ್ರ ಜೀವನಾಧಾರ ಎಂದು ಸಿದ್ಧಪಡಿಸುವುದು 2. ವರ್ಷದ ಹೆಚ್ಚಿನ ತಿಂಗಳುಗಳಲ್ಲಿ ಜಮೀನಿನಿಂದ 8 ಕಿಲೋಮೀಟರ್‌ಗಳೊಳಗೇ ವಾಸಿಸಬೇಕು 3. ಜಮೀನಿನಲ್ಲಿ ವ್ಯವಸಾಯ ಆರಂಭಿಸಿದ ಮೇಲೆ ಸ್ವತಃ ಅಥವಾ ಕುಟುಂಬದ ಸದಸ್ಯರ ಶ್ರಮದಿಂದ ಮಾತ್ರ ವ್ಯವಸಾಯ ನಡೆಸಬೇಕು ಎಂಬ ಮೂರು ಶರತ್ತುಗಳನ್ನು ಸೇರಿಸಲಾಯಿತು.

ಕಾನೂನುಬದ್ಧ ಹಕ್ಕನ್ನು ಬಾರ್ಗಾದಾರರು ಅನುಭವಿಸಲು ಸಾಧ್ಯವಾಗುವಂತೆ “ಆಪರೇಶನ್ ಬಾರ್ಗಾ” ಎಂದು ಪ್ರಸಿದ್ಧವಾದ ಕ್ರಮಕೈಗೊಳ್ಳಲಾಯಿತು. ಬಾರ್ಗಾದಾರರ ಹತ್ತಿರ ಹೋಗಿ ಅವರಿಗೆ ಹಕ್ಕುಗಳ ಬಗ್ಗೆ ತಿಳುವಳಿಕೆ ನೀಡಿ, ವಿಶೇಷ ತರಬೇತು ಹೊಂದಿದ ಅಧಿಕಾರಿಗಳ ಸಹಕಾರದೊಂದಿಗೆ ಬಾರ್ಗಾದಾರರ ಹೆಸರನ್ನು ದಾಖಲುಮಾಡಿಕೊಳ್ಳುವುದು ಇದರ ಉದ್ದೇಶ. ಕಳೆದ 30 ವರ್ಷಗಳಲ್ಲಿ ಎರಡು ಲಕ್ಷ ಎಪ್ಪತ್ತೈದು ಸಾವಿರ ಬಾರ್ಗಾದಾರರ ಹೆಸರು ದಾಖಲಾಗಿದ್ದರೆ ಈ ಕ್ರಮದ ನಂತರ ಎರಡೇ ವರ್ಷಗಳಲ್ಲಿ 10 ಲಕ್ಷ ಬಾರ್ಗಾದಾರರ ಹೆಸರು ದಾಖಲಾಯಿತು.

ಇದುವರೆಗೆ ಬಾರ್ಗಾದಾರರು ಜೋತೇದಾರರು ಅಥವಾ ಜಮೀನುದಾರರಿಂದ ತಮ್ಮ ಖರ್ಚಿಗೆ ಹಾಗೂ ವ್ಯವಸಾಯದ ಸಾಮಗ್ರಿಗಳಿಗಾಗಿ ವಿಪರೀತ ಬಡ್ಡಿಗೆ ಸಾಲ ಪಡೆಯಬೇಕಾಗುತ್ತಿತ್ತು. ಈ ಕಪಿಮುಷ್ಟಿಯಿಂದ ಅವರನ್ನು ಬಿಡಿಸಲು ಎಡರಂಗ ಸರ್ಕಾರ ಅವರಿಗೆ ಸಾಂಸ್ಥಿಕ ಸಾಲದ ವ್ಯವಸ್ಥೆ ಮಾಡಿತು. ಇದಕ್ಕೆ ಬಡ್ಡಿದರ ಕೇವಲ 4%. ಅದೂ ಮಾರ್ಚ್ 31 ರೊಳಗೆ ಸಾಲ ಮರುಪಾವತಿ ಮಾಡಿದರೆ ಬಡ್ಡಿಮನ್ನಾ. ಈ ಹಿಂದೆ ಬಡ್ಡಿದರ 100ರಿಂದ 150 ಶೇಕಡಾ ಇತ್ತು! ತಮಗಾಗಿ ಇಂತಹ ಪ್ರಮುಖ ಕ್ರಮಗಳನ್ನು ಪ್ರಾಮಾಣಿಕವಾಗಿ ಕೈಗೊಂಡ ಎಡರಂಗ ಸರ್ಕಾರಕ್ಕೆ ಗೇಣಿದಾರರು ಇದರಿಂದಾಗಿ ಗಟ್ಟಿ ಬೆಂಬಲಿಗರಾಗಿದ್ದಾರೆ.

ಸಣ್ಣ, ಮಧ್ಯಮ ರೈತರು– ಗೇಣಿಯಿಂದ ಮುಕ್ತಿ

ಸಣ್ಣ ಹಾಗೂ ಮಧ್ಯಮ ರೈತರಿಗೆ ಗೇಣಿ ಹಾಗೂ ಸಾಲದ ಹೊರೆಗೆ ಸಂಬಂಧಪಟ್ಟಂತೆ ಕೆಲವು ಪರಿಹಾರಗಳನ್ನು ಪಶ್ಚಿಮ ಬಂಗಾಲದ ಎಡರಂಗ ಸರ್ಕಾರ ನೀಡಿದೆ. ಅಧಿಕಾರ ವಹಿಸಿಕೊಂಡೊಡನೇ 4 ಎಕರೆವರೆಗೆ ನೀರಾವರಿ ಜಮೀನು ಹಾಗೂ 6 ಎಕರೆವರೆಗೆ ಖುಷ್ಕೀ ಜಮೀನಿಗೆ ಗೇಣಿ ಮನ್ನಾಮಾಡಲಾಯಿತು. ಉಳಿದವರಿಗೆ ಅದನ್ನು ಅರ್ಧಕ್ಕಿಳಿಸಲಾಯಿತು. ರೈತರ ಒಡೆತನದ ಪರಿಕಲ್ಪನೆಯಲ್ಲಿ ಗೇಣಿಯೆಂಬುದು ಸರಿಬರುವುದಿಲ್ಲವಾದ್ದರಿಂದ ಅದನ್ನು ರದ್ದುಗೊಳಿಸಿ ಅದರ ಬದಲು ರೂ. 50,000 ಕ್ಕಿಂತ ಹೆಚ್ಚು ಜಮೀನು ಸಂಪತ್ತಿರುವವರಿಂದ ಹಂತ-ಹಂತವಾಗಿ ಹೆಚ್ಚುವ ಕಂದಾಯವನ್ನು ಪಡೆಯುವ ಕ್ರಮವನ್ನು ಕಳೆದ ವರ್ಷ ಜಾರಿಗೆ ತರಲಾಯಿತು.

ಇದರಿಂದ 80 ಶೇಕಡಾ ರೈತರ ಜಮೀನು ಕಂದಾಯದಿಂದ ಹೊರತಾಗಿದೆ. ಈ ಕಂದಾಯ ವಿಧಾನ ರಾಜ್ ಸಮಿತಿಯ ಶಿಫಾರಸಿಗನುಗುಣವಾಗಿ ಸ್ವಲ್ಪ ಬದಲಾವಣೆಗಳೊಂದಿಗೆ ರೂಪಿತವಾಗಿತ್ತು. ಇದನ್ನು ದೇಶದಲ್ಲೇ ಮೊಟ್ಟಮೊದಲು ಜಾರಿಗೆ ತಂದದ್ದು ಪಶ್ಚಿಮ ಬಂಗಾಲದ ಎಡರಂಗ ಸರ್ಕಾರ. ಈ ಕ್ರಮಗಳು ಸಣ್ಣ ಹಾಗೂ ಮಧ್ಯಮವರ್ಗದವರ ವಿಶ್ವಾಸ ಪಡೆಯಲು ಎಡರಂಗ ಸರ್ಕಾರಕ್ಕೆ ಬಹಳಷ್ಟು ಸಹಾಯಕವಾದವು.

ಶ್ರೀಮಂತ ರೈತರ ವಿಶ್ವಾಸವನ್ನು ಗಳಿಸುವುದಕ್ಕಾಗಿಯೂ ಎಡರಂಗ ಸರ್ಕಾರ ಕೆಲವು ಕ್ರಮಕೈಗೊಂಡಿತು. ತಮ್ಮ ಬೆಳೆಗಳಿಗೆ, ವಿಶೇಷವಾಗಿ ಸೆಣಬು, ಆಲೂಗಡ್ಡೆ ಇತ್ಯಾದಿ ಹಣದ ಬೆಳೆಗಳಿಗೆ ತಕ್ಕ ಪ್ರತಿಫಲ ದೊರೆಯುವಂತಾಗಲು, ಈ ಬೆಳೆಗಳ ಬೆಲೆಯಲ್ಲಿ ರಭಸದ ಕುಸಿತವಾದಾಗ ಇವನ್ನು ತಾನು ತಿಳಿಸಿರುವ ಕನಿಷ್ಠ ಬೆಲೆಗೆ ಕೊಳ್ಳಲು ಎಡರಂಗ ಸರ್ಕಾರ ಮುಂದೆ ಬರುತ್ತದೆ.

ಗ್ರಾಮೀಣ ಉತ್ಪಾದನೆಯಲ್ಲಿ ಹೆಚ್ಚಳ

ಇದಲ್ಲದೆ 3 ಲಕ್ಷ 33 ಸಾವಿರ ಎಕರೆ ಜಮೀನನ್ನು ಭೂಹೀನ ಹಾಗೂ ಅಲ್ಪ ಜಮೀನಿರುವವರಿಗೆ ಹಂಚಲಾಯಿತು. ಇದರಿಂದಾಗಿ ಪಶ್ಚಿಮ ಬಂಗಾಲದಲ್ಲಿ ವಿತರಣೆಗೊಂಡ ಹೆಚ್ಚುವರಿ ಭೂಮಿ ಇಡೀ ಭಾರತದಲ್ಲಿ ಈ ರೀತಿ ವಿತರಣೆಗೊಂಡ ಜಮೀನಿನ ಅರ್ಧದಷ್ಟಾಗುತ್ತದೆ! ಈ ರೀತಿ ಜಮೀನುಪಡೆದವರು ಮತ್ತು ಗೇಣಿದಾರರಿಗೆ ನೆರವಾಗುವಂತೆ ಸೇವಾ ಸಹಕಾರಿಗಳನ್ನು ಸಂಘಟಿಸಲು ಎಡರಂಗ ಸರ್ಕಾರ ಪ್ರಯತ್ನಿಸುತ್ತದೆ. ಇದು ಗ್ರಾಮೀಣ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಬಹಳ ಸಹಾಯಕವಾಗುತ್ತದೆ. ಎಡರಂಗ ಸರ್ಕಾರ ಭೂಹೀನ ಕೃಷಿಕಾರ್ಮಿಕರು, ಕರಕುಶಲಿಗಳು ಹಾಗೂ ಮೀನುಗಾರರು ತಾವು 1975ರ ಜೂನ್ 26ರಿಂದ ವಾಸವಾಗಿದ್ದಲ್ಲಿ ಪ್ರತಿಯೊಬ್ಬರಿಗೆ 8 ಡೆಸಿಮಲ್‌ಗಳಷ್ಟು ಮನೆ ನಿವೇಶನ ಕೊಡಿಸಿತು. ಅಲ್ಲದೆ ಮನೆ ಕಟ್ಟಲು ಸಾಲವನ್ನೂ ಕೊಡಲಾಗುವುದು. ಇತ್ತೀಚೆಗೆ ಪಶ್ಚಿಮ ಬಂಗಾಲ ವಿಧಾನ ಸಭೆ ಭೂಸುಧಾರಣಾ ಕಾನೂನಿಗೆ ವ್ಯಾಪಕ ತಿದ್ದುಪಡಿ ತಂದು ಹೆಚ್ಚುವರಿ ಜಮೀನನ್ನು ಗುರುತಿಸಿ ವಶಪಡಿಸಿಕೊಳ್ಳುವಲ್ಲಿ ಇದ್ದ ಕೊರತೆಗಳನ್ನು ನಿವಾರಿಸಲಾಗಿದೆ. ಈಗಾಗಲೇ ಇಡೀ ಭಾರತದಲ್ಲಿ ವಶಪಡಿಸಿಕೊಂಡ ಅರ್ಧದಷ್ಟು ಹೆಚ್ಚುವರಿ ಜಮೀನನ್ನು ಪಶ್ಚಿಮ ಬಂಗಾಲದಲ್ಲಿ ವಶಪಡಿಸಿಕೊಳ್ಳಲಾಗಿದೆ. ತಿದ್ದುಪಡಿಗೊಂಡ ಕಾಯ್ದೆಯು ಇನ್ನಷ್ಟು ಹೆಚ್ಚುವರಿ ಜಮೀನನ್ನು ವಶಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.

ಪಶ್ಚಿಮ ಬಂಗಾಲದ ಗ್ರಾಮಾಂತರ ಕ್ಷೇತ್ರದಲ್ಲಿ ಎಡರಂಗ ಸರ್ಕಾರದ ವಿವಿಧ ಕ್ರಮಗಳಿಂದಾಗಿ ಆರ್ಥಿಕ ಹಾಗೂ ಸಾಮಾಜಿಕ ವಲಯದಲ್ಲಿ ಕಂಡುಬರುತ್ತಿರುವ ಪರಿವರ್ತನೆಗಳನ್ನು ಕಂಡು ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯ ವೀಕ್ಷಕ ಶ್ರೀ ಬೋಲಾ ಪಾಸ್ಟಿನ್ ಶಾಸ್ತ್ರಿ ಹಾಗೂ ಇತರ ಹಲವರು ಮೆಚ್ಚಿಗೆ ಸೂಚಿಸಿದ್ದಾರೆ. ವಸ್ತುನಿಷ್ಠವಾಗಿ, ಇನ್ನು ಆಗಬೇಕಾಗಿರುವುದರೊಡನೆ ಹೋಲಿಸಿದರೆ ಇದುವರೆಗಿನದ್ದು ಮಹಾನ್ ಸಾಧನೆಯೇನಲ್ಲ. ಆದರೆ ಗ್ರಾಮೀಣ ಕ್ಷೇತ್ರದಲ್ಲಿ ಸಾಮಾಜಿಕ ಪರಿವರ್ತನೆಯ ನಿಜವಾದ ಶಕ್ತಿ ತನ್ನ ಚಲನೆ ಆರಂಭಿಸುವಂತೆ ಮಾಡುವಲ್ಲಿ ಇದು ಆಳವಾದ ಪರಿಣಾಮ ಬೀರಿದೆ.

o

ಪಶ್ಚಿಮ ಬಂಗಾಳದ ಸಾಂಸ್ಕೃತಿಕ ಪರಂಪರೆ

ಪ. ಬಂಗಾಳದ ಸಾಂಸ್ಕೃತಿಕ ಪರಂಪರೆಗೆ ಸುದೀರ್ಘ ಇತಿಹಾಸವಿದೆ. ವಂಗ ವಿಭಜನೆಯಾಗುವುದಕ್ಕಿಂತ ಬಹು ಹಿಂದಿನಿಂದಲೇ ಬೆಳೆದುಬಂದಿದ್ದ ಈ ಉನ್ನತ ಸಾಂಸ್ಕೃತಿಕ ಪರಂಪರೆ ಜನಜೀವನದಲ್ಲಿ ಸಮ್ಮಿಳಿತವಾಗಿತ್ತು. ಕಲೆ ಮತ್ತು ಸಂಸ್ಕೃತಿ ಈ ಪ್ರದೇಶದಲ್ಲಿ ಜನ ಉಸಿರಾಡುವಷ್ಟೇ ಸುಲಭವಾಗಿ ಬೆಳೆದುಬರುತ್ತವೆಂದೂ ಹೇಳಲಾಗುತ್ತಿದೆ. ಬಂಗಾಳಿ ಭಾಷೆ ಮತ್ತು ಸಾಹಿತ್ಯದ ಇತಿಹಾಸ ಸುಮಾರು ಹತ್ತನೆಯ ಶತಮಾನಕ್ಕೂ ಹಿಂದಿನದ್ದು. ಇಲ್ಲಿನ ಶಿಲ್ಪ, ವಾಸ್ತು, ಶಿಲಾಲೇಖನಗಳು, ಸ್ತಂಭಗಳು ಇತ್ಯಾದಿಗಳು ಇನ್ನೂ ಹಿಂದಿನ ಚರಿತ್ರೆಯನ್ನು ಹೊಂದಿವೆ.

ಕ್ರಿಸ್ತಶಕದ ಆದಿಯಲ್ಲೇ ಆರಂಭವಾದ ಈ ಪ್ರದೇಶದ ಸಂಸ್ಕೃತಿ ಬ್ರಿಟಿಷರು ಭಾರತಕ್ಕೆ ಬರುವವರೆಗೂ ಹಾಗೆಯೇ ಮುಂದುವರಿದುಕೊಂಡು ಬಂದಿತ್ತು. ಬಂಗಾಳದ ಮಧ್ಯಯುಗೀನ ಸಂಸ್ಕೃತಿಯೂ ಈ ಪ್ರಾರಂಭದ ಸಾಂಸ್ಕೃತಿಕ ಪರಂಪರೆಯ ಮುಂದುವರಿಕೆಯೇ ಆಗಿತ್ತು ಮಾತ್ರವಲ್ಲ ಆ ಮೇಲಿನ ಸಂಸ್ಕೃತಿಯನ್ನು ಜೋಡಿಸುವ ಕೊಂಡಿಯೂ ಆಗಿತ್ತು.

ಬ್ರಿಟಿಷ್ ಆಳ್ವಿಕೆಯ ಪರಿಣಾಮ

ಬ್ರಿಟಿಷರ ಆಡಳಿತೆ ಬಂಗಾಳದ ಸಂಸ್ಕೃತಿಗೆ ಹೊಸ ಸ್ವರೂಪವೊಂದನ್ನು ನೀಡಿ ಅದರ ಗತಿಯನ್ನು ಬದಲಾಯಿಸಿತು. ಇಂಗ್ಲೀಷ್ ಶಿಕ್ಷಣ ಮತ್ತು ಅದರೊಂದಿಗೇ ಬಂದ ಐರೋಪ್ಯ ಸಂಸ್ಕೃತಿಯ ಮೌಲ್ಯಗಳು ಬಂಗಾಳಿ ಸಂಸ್ಕೃತಿಗೆ ಹೊಸ ಆಯಾಮವೊಂದನ್ನು ನೀಡಿ ಜನಜೀವನದ ಬೇರೆಬೇರೆ ಕ್ಷೇತ್ರಗಳಲ್ಲಿ ಹಿಂದೆಂದೂ ಕಾಣದಿದ್ದ ಉಚ್ಛ್ರಾಯಕ್ಕೆ ಕಾರಣವಾಯಿತು. ಪ್ಲಾಸಿ ಕದನದಿಂದ ಮೊದಲುಗೊಂಡು ಸ್ವಾತಂತ್ರ್ಯ ದೊರೆತು ದೇಶದ ವಿಭಜನೆ ಆಗುವವರೆಗಿನ ಸುಮಾರು ಇನ್ನೂರು ವರ್ಷಗಳ ಕಾಲವೂ ಬಂಗಾಳಿ ಸಂಸ್ಕೃತಿಯ ಮಟ್ಟಿಗೆ ಹೇಳುವುದಾದರೆ ಒಂದು ನಿರಂತರ ಪ್ರವಾಹ. ಈ ಕಾಲಾವಧಿಯಲ್ಲಿ ಬಂಗಾಳಿ ಸಂಸ್ಕೃತಿಯ ದಿಗಂತದಲ್ಲಿ ಕಾಣಿಸಿಕೊಂಡು ಮೆರೆದ ವ್ಯಕ್ತಿಗಳೂ ಅನೇಕ. ರಾಜಾರಾಮ ಮೋಹನರಾಯ್, ಬಂಕಿಮಚಂದ್ರ, ರಬೀಂದ್ರನಾಥ ಠಾಗೋರ್, ವಿವೇಕಾನಂದ, ಅರವಿಂದಘೋಷ್, ಅಬನೀಂದ್ರನಾಥ ಠಾಗೋರ್, ಗಗನೇಂದ್ರನಾಥ ಠಾಗೋರ್, ನಂದಲಾಲಬಸು, ಜಾಮಿನಿರಾಯ್, ರಾಮಕಿಂಕರ್, ಜಗದೀಶಚಂದ್ರಬೋಸ್, ತಾರಾಶಂಕರ ಬ್ಯಾನರ್ಜಿ, ವಿಭೂತಿಭೂಷಣಬಂದ್ಯೋಪಾಧ್ಯಾಯ, ಈಶ್ವರಚಂದ್ರವಿದ್ಯಾಸಾಗರ, ಅಕ್ಷಯಕುಮಾರ್, ಸತ್ಯಜಿತ್‌ರೇ, ಕಾಜಿ ನಝ್ರುಲ್ ಇಸ್ಲಾಮ್, ಹೀಗೆ ಒಬ್ಬೊಬ್ಬರೂ ಬಂಗಾಳಿ ಸಂಸ್ಕೃತಿಯ ಬೆಳವಣಿಗೆ ಮತ್ತು ವಿಕಸನಕ್ಕೆ ಕಾರಣರಾದರು. ಇವರಲ್ಲಿ ಅಗ್ರಸ್ಥಾನ ನಿಸ್ಸಂಶಯವಾಗಿಯೂ ರಬೀಂದ್ರನಾಥ ಠಾಗೋರರಿಗೆ ಸಲ್ಲುತ್ತದೆ. ರವೀಂದ್ರರದ್ದು ಬಹುಮುಖ ವ್ಯಕ್ತಿತ್ವ, ಅವರ ಸೃಜನಾತ್ಮಕ ಪ್ರತಿಭೆ ಮತ್ತು ಕಲ್ಪನಾಶಕ್ತಿಗೂ ಹಲವು ಹತ್ತು ಮುಖಗಳು. ಇಡೀ ವಿಶ್ವವೇ ತನ್ನ ಕುಟುಂಬವೆಂದು ತಿಳಿದಿದ್ದ ಠಾಗೋರ್ ಅವರದ್ದು ಅಪ್ಪಟ ಮಾನವತಾವಾದಿ ದೃಷ್ಟಿಕೋನ. ಅವಿಭಜಿತ ಬಂಗಾಳದಲ್ಲಿ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಪ್ರತಿಯೊಂದು ಕ್ಷೇತ್ರದಲ್ಲೂ ಪರಿಪೂರ್ಣತೆ ಸಾಧಿಸಿದ್ದ ವ್ಯಕ್ತಿ ರಬೀಂದ್ರನಾಥ ಠಾಗೋರರೆನ್ನಬಹುದು.

ವಂಗವಿಭಜನೆಯ ದುಷ್ಪರಿಣಾಮ

ಬಂಗಾಳದ ನೆಲ, ಆರ್ಥಿಕತೆ, ಸಾಮಾಜಿಕ ಸ್ಥಿರತೆ ಮತ್ತು ಪ್ರಾದೇಶಿಕ ಸಮಗ್ರತೆಗಳಿಗೆ ಸಂಬಂಧಿಸಿದಂತೆ ಬಂಗಾಳಿ ಜನಜೀವನದ ಮೇಲೆ ವಂಗ ವಿಭಜನೆ ಉಂಟುಮಾಡಿದ ಹಾನಿ ಅಪಾರ. ಬಂಗಾಳಿ ಸಂಸ್ಕೃತಿಯ ಮೇಲೂ ಇದು ಸಾಕಷ್ಟು ದುಷ್ಪರಿಣಾಮವುಂಟುಮಾಡಿದೆ. ಬ್ರಿಟಿಷರ ಕಾಲದಿಂದಲೂ ಬೆಳೆದುಬಂದಿದ್ದ ಸಂಸ್ಕೃತಿಯ ನಿರಂತರತೆಗೆ ವಿಭಜನೆ ತಡೆಯುಂಟುಮಾಡಿತು. ಇದರಿಂದಾಗಿ ಜೀವನ ಮೌಲ್ಯಗಳಲ್ಲಿ ವಿಕೃತಿಯುಂಟಾದುದರ ಲಕ್ಷಣಗಳೂ ಕಾಣಿಸಿಕೊಂಡವು. ವಂಗವಿಭಜನೆಯಿಂದಾಗಿ ಉಂಟಾದ ಹಾನಿಗಳಲ್ಲಿ ಬಹುಶಃ ಇದೇ ಅಗಾಧದಾದದ್ದು. ಜಪಾನೀ ಆಕ್ರಮಣವೊಡ್ಡಿದ ಭಯ ಮತ್ತು ಅದರ ದುಷ್ಪರಿಣಾಮಗಳು, ಭೀಕರ ಬರಗಾಲ, ಕೋಮುವಾರು ಕಗ್ಗೊಲೆಗಳು, ಪೂರ್ವಬಂಗಾಳದಿಂದ ಭಾರತಕ್ಕೆ ಮತ್ತು ಭಾರತದಿಂದ ಪೂರ್ವ ಬಂಗಾಳಕ್ಕೆ ವಲಸೆಹೋದ ಅಪಾರ ಸಂಖ್ಯೆಯ ನಿರಾಶ್ರಿತರಿಂದಾಗಿ ಸಾಮಾಜಿಕ ಸಮತೋಲದಲ್ಲಿ ಕಂಡುಬಂದ ಏರುಪೇರು ಇವು ಈ ಪ್ರಾಂತವನ್ನು ಮೂಲಭೂತವಾಗಿ ಅಲುಗಾಡಿಸಿದವು. ಬಂಗಾಳಿ ಜನರ ಸುರಕ್ಷಿತಾ ಭಾವದ ಮೇಲೆ ಇದು ತೀವ್ರ ಆಘಾತವುಂಟುಮಾಡಿತಲ್ಲದೆ ಸಾಂಸ್ಕೃತಿಕ ಚಟುವಟಿಕೆಗಳನ್ನೂ ಒಳಗೊಂಡಂತೆ ಜನರ ಶಾಂತಿಕಾಲದ ಎಲ್ಲ ಹವ್ಯಾಸಗಳ ಮೇಲೆ ಹೇಳಲಾರದಷ್ಟು ಹಾನಿಯುಂಟಾಯಿತು.

ಸ್ವಾತಂತ್ರ್ಯಾನಂತರದ ಪ. ಬಂಗಾಳ ಅವಿಭಕ್ತ ಬಂಗಾಳ ಪ್ರಾಂತ್ಯಕ್ಕಿಂತ ಪ್ರಾದೇಶಿಕವಾಗಿ ತುಂಬಾ ಚಿಕ್ಕದಾಗಿದೆ. ಆದರೂ ಸ್ವಾತಂತ್ರ್ಯದ ಗಳಿಕೆ ಮತ್ತು ಆ ಬಳಿಕ ರಾಜ್ಯದಲ್ಲಿ ನಡೆದ ಅನೇಕ ವಿದ್ಯಮಾನಗಳ ಫಲಸ್ವರೂಪವಾಗಿ ಈ ರಾಜ್ಯವು ತನ್ನ ಆಘಾತಗಳಿಂದ ಚೇತರಿಸಿಕೊಂಡು ತನ್ನತನವನ್ನು ಮರಳಿಗಳಿಸಿಕೊಳ್ಳುತ್ತಿರುವುದರ ಲಕ್ಷಣಗಳು ಕಾಣಿಸುತ್ತಿವೆ. ಸದ್ಯ ಅಧಿಕಾರದಲ್ಲಿರುವ ಎಡರಂಗ ಸರಕಾರವೂ ಈ ನಿಟ್ಟಿನಲ್ಲಿ ಬಹುಮುಖ್ಯ ಪಾತ್ರವಹಿಸಿದೆ. ಇಲ್ಲಿನ ಸಾಂಸ್ಕೃತಿಕ ಚಳುವಳಿಯ ಮುನ್ನಡೆ ಮತ್ತು ನಿರಂತರತೆಯಲ್ಲಿ ಒಮ್ಮೆ ಕಾಣಿಸಿಕೊಂಡಿದ್ದ ಬಿರುಕು ಅಳಿಸಿ ಅದೀಗ ತನ್ನ ಹಿಂದಿನ ಸ್ಫೂರ್ತಿಯನ್ನು ಮರಳಿಗಳಿಸಿದೆ. ಇದರ ಪರಿಣಾಮವಾಗಿ ಸೃಜನಾತ್ಮಕ ಚಟುವಟಿಕೆಗಳೂ ಬೆಳೆಯಲಾರಂಭಿಸಿವೆ. ಆದರೂ ತನ್ನ ಮೊದಲಿನ ಗಾತ್ರದ ಮೂರನೇ ಒಂದರಷ್ಟು ಕಿರಿದಾಗಿರುವ ಈ ರಾಜ್ಯ ತನ್ನ ಸಾಂಸ್ಕೃತಿಕ ಚಟುವಟಿಕೆಗಳನ್ನೆಲ್ಲ ಈ ಸೀಮಿತ ಪ್ರಾದೇಶಿಕ ಚೌಕಟ್ಟಿನೊಳಗೇ ತುರುಕಿಸಿಕೊಳ್ಳಬೇಕಾಗಿರುವುದು ಅದರ ಸಾಂಸ್ಕೃತಿಕ ಚಳುವಳಿಯ ಬೆಳವಣಿಗೆಗೆ ದೊಡ್ಡ ತೊಡಕಾಗಿ ಪರಿಣಮಿಸಿದೆ.

ರಂಗಭೂಮಿ ಮತ್ತು ಚಲನಚಿತ್ರ

ಕಲ್ಕತ್ತಾದ ರಂಗಭೂಮಿಯ ಚಿತ್ರಣವೂ ವೈವಿಧ್ಯಪೂರ್ಣ. ಈ ಮಹಾನಗರದಲ್ಲಿ ತುಂಬಿರುವ ಎಲ್ಲ ವಿರೋಧಾಭಾಸಗಳೂ ರಂಗಭೂಮಿ ಚಳುವಳಿಯ ಮೇಲೂ ತಮ್ಮ ಅಚ್ಚೊತ್ತಿವೆ. ಬೇರೆಬೇರೆ ವರ್ಗಗಳ, ವಿವಿಧ ಅಭಿರುಚಿಗಳುಳ್ಳ ಜನರ ಸಾಂಸ್ಕೃತಿಕ ತೃಷೆಯನ್ನು ಹಿಂಗಿಸಬೇಕಾದ ಕಲ್ಕತ್ತಾದ ರಂಗಭೂಮಿ ವರ್ಣಮಯವಾಗಿರುವುದು ಸಹಜ. ಸಾಂಪ್ರದಾಯಿಕ ವ್ಯಾಪಾರೀ ರಂಗಭೂಮಿಯಿಂದ ತೊಡಗಿ ಬಡತನ ಮತ್ತು ಮಧ್ಯಮ ವರ್ಗದ ನಿರಾಸೆಗಳನ್ನು ತುಣುಕು ತುಣುಕಾಗಿ ಬಿಂಬಿಸುವ ನವೀನ ನಾಟಕಗಳು, ಸೆಕ್ಸ್ ತುಂಬಿದ ಮನರಂಜನೆ, ಹಾಸ್ಯಪ್ರಧಾನ ನಾಟಕಗಳು, ಹೊಸ ಮತ್ತು ಹಳೆಯ ವಿದೇಶೀ ನಾಟಕಗಳ ಅವತರಣಿಕೆಗಳು ಮತ್ತು ಆಧುನಿಕ ರಂಗಪ್ರಯೋಗಗಳವರೆಗೆ ಪ್ರತಿಯೊಂದನ್ನೂ ಕಲ್ಕತ್ತಾದಲ್ಲಿ ಕಾಣಬಹುದು. ಸುಮಾರು ನೂರು ವರ್ಷಗಳ ಇತಿಹಾಸವುಳ್ಳ ವ್ಯಾಪಾರಿ ರಂಗಭೂಮಿಯಂತೂ ಹಲವಾರು ಏಳುಬೀಳುಗಳನ್ನು ಕಂಡಿದೆ; ತನ್ನ ಪ್ರೇಕ್ಷಕ ಸಮುದಾಯವನ್ನು ಉಳಿಸಿಕೊಳ್ಳಲು ಬಹಳಷ್ಟು ಹೊಂದಾಣಿಕೆಗಳನ್ನೂ ಮಾಡಿಕೊಂಡಿದೆ. ಅರೆನಗ್ನ ದೃಶ್ಯಗಳಿಗಾಗಿ ಹಸಿದಿರುವ ಮಧ್ಯಮವರ್ಗದ ದೌರ್ಬಲ್ಯವನ್ನು ಉಪಯೋಗಿಸಿಕೊಂಡು ಅಂಗಾಂಗ ಪ್ರದರ್ಶನ ನಡೆಸುವ ಪ್ರಯತ್ನವನ್ನೂ ವ್ಯಾಪಾರಿ ರಂಗಭೂಮಿ ನಡೆಸಿರುವುದನ್ನು ಕಾಣಬಹುದು. ಬೊಂಬಾಯಿ ಮತ್ತು ದಕ್ಷಿಣದಲ್ಲಿ ತಯಾರಾಗುವ ಮಸಾಲೆ ಸಿನಿಮಾಗಳೂ ಪ್ರೇಕ್ಷಕರಿಂದ ಈ ಬಗೆಯ ಮೆಚ್ಚುಗೆ ಗಳಿಸಿವೆಯಾದರೂ ಬಂಗಾಳದ ಚಲನ ಚಿತ್ರರಂಗ ಇನ್ನೂ ಈ ಮಟ್ಟಕ್ಕೆ ಇಳಿದಿಲ್ಲ.

ಕಲ್ಕತ್ತಾದ ಹವ್ಯಾಸಿ ರಂಗಭೂಮಿ ವೃತ್ತಿನಿರತ ವ್ಯಾಪಾರಿ ರಂಗಭೂಮಿಗೆ ಸಮಾನಾಂತರವಾಗಿ ಬೆಳೆಯುತ್ತಿದೆ. ಸಾಮಾಜಿಕ ಕಳಕಳಿ ಬಲವಾಗಿರುವ ಈ ಚಳುವಳಿಯಲ್ಲಿ ಕಾಲೇಜು ಅಧ್ಯಾಪಕರು, ನೀಲಿಕಾಲರಿನ ನೌಕರರು, ಯುವ ಅಧಿಕಾರಿಗಳು ಮತ್ತು ವಿದ್ಯಾರ್ಥಿಗಳೇ ಮುಂತಾದವರು ಬೇಧಭಾವಗಳನ್ನು ಮರೆತು ಒಂದಾಗಿ ದುಡಿಯುವುದನ್ನು ಕಾಣಬಹುದು. ವ್ಯಾಪಾರಿ ರಂಗಭೂಮಿಗಿರುವಂತೆ ಇಂತಹ ಹವ್ಯಾಸಿ ನಾಟಕದ ಗುಂಪುಗಳಲ್ಲಿ ಸುಮಾರು ಇಪ್ಪತ್ತು ಗುಂಪುಗಳಿಗೆ ಪ್ರದರ್ಶನ ನಡೆಸಲು ಖಾಯಂ ವ್ಯವಸ್ಥೆಯಿಲ್ಲ. ಕಲ್ಕತ್ತದ ತುಂಬೆಲ್ಲ ಹರಡಿಕೊಂಡಿರುವ ಇಂತಹ ಗುಂಪುಗಳು ತಮಗೆ ತಿಂಗಳಿಗೆ ಹತ್ತುದಿನವಾದರೂ ಪ್ರದರ್ಶನಕ್ಕೆ ಅವಕಾಶ ಸಿಕ್ಕಿದರೆ ಸಾಕೆನ್ನುತ್ತಾರೆ; ಇನ್ನು ಐವತ್ತಕ್ಕೂ ಮಿಕ್ಕಿದ ಗುಂಪುಗಳಿಗೆ ವಾರಕ್ಕೆ ಒಂದಾದರೂ ಅವಕಾಶ ಸಿಕ್ಕಿದರೆ ಸಾಕು. ಇತರ ಹಲವು ಗುಂಪುಗಳಿಗೆ ತಿಂಗಳಿಗೆ ಒಂದು ರಾತ್ರಿಯ ಪ್ರದರ್ಶನಕ್ಕೂ ಅವಕಾಶ ಸಿಗುವುದಿಲ್ಲ. ಈ ಗುಂಪುಗಳಲ್ಲಿರುವ ನಟರಲ್ಲಿ ಹೆಚ್ಚಿನವರಿಗೆ ಕ್ರಮಬದ್ಧವಾದ ರಂಗತರಬೇತಿ ಕೂಡಾ ಸಿಕ್ಕಿರುವುದಿಲ್ಲ. ದಿನವಿಡೀ ದುಡಿದು ಸುಸ್ತಾಗುವ ಈ ಮಂದಿ ತಮಗೆ ಸಿಗುವ ಅಲ್ಪಸ್ವಲ್ಪ ಸಮಯಾವಕಾಶದಲ್ಲಿ ತರಬೇತಿಪಡೆದು ನಾಟಕಗಳಲ್ಲಿ ಭಾಗವಹಿಸಬೇಕಾದರೆ ಅದಕ್ಕೆ ಅವರ ಉತ್ಸಾಹ ಮತ್ತು ರಂಗಭೂಮಿಯ ಕಡೆಗಿರುವ ಅವರ ಒಲವು ಮತ್ತು ಅವರ ರಾಜಕೀಯ ಬದ್ಧತೆಗಳೇ ಪ್ರೇರಕವಾಗಿರಬೇಕು. ರಂಗಭೂಮಿಯ ಬಾಡಿಗೆ ಮತ್ತು ಜಾಹೀರಾತು ಮತ್ತಿತರ ಖರ್ಚುಗಳು ಮಿತಿಮೀರಿರುವ ಈ ಕಾಲದಲ್ಲಿ ಇಂತಹ ಗುಂಪುಗಳ ಆರ್ಥಿಕ ಪರಿಸ್ಥಿತಿ ಏನೇನೂ ಚೆನ್ನಾಗಿಲ್ಲ. ಹಾಗಾಗಿ ಇಂತಹ ಗುಂಪುಗಳಿಂದ ಕೆಲವರು ವ್ಯಾಪಾರಿ ರಂಗಭೂಮಿಗೆ ವಲಸೆ ಹೋಗುತ್ತಾರೆ. ಇನ್ನು ಕೆಲವರು ಸಿನೇಮಾ ನಿರ್ಮಾಪಕರ ಬೆನ್ನು ಹತ್ತುತ್ತಾರೆ. ಇಷ್ಟೆಲ್ಲ ಕಷ್ಟಗಳಿದ್ದರೂ ಕಲ್ಕತ್ತಾದ ರಂಗಭೂಮಿ ಚಳುವಳಿ ಜಾಗತಿಕ ರಂಗಭೂಮಿಯ ಅತ್ಯುತ್ತಮ ರಚನೆಗಳನ್ನು ತನ್ನ ಪ್ರೇಕ್ಷಕರಿಗೆ ನೀಡಲು ಮುಂದೆಬರುತ್ತಿದೆ. ಈ ವರ್ಷ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ಈ ಗುಂಪುಗಳು ಬ್ರೆಷ್ಟ್, ವೆಸ್ಕರ್, ಡಾರಿಯೋ ಫೊ ಮುಂತಾದವರ ನಾಟಕಗಳನ್ನು ಪ್ರಯೋಗಿಸಲಿವೆ. ಇವುಗಳೊಂದಿಗೆ ಸಮಕಾಲೀನ ಬಂಗಾಳಿ ನಾಟಕಕಾರರಾದ ಮನೋಜ್‌ಮಿತ್ರ, ಮೋಹಿತ್ ಚಟ್ಟೋಪಾಧ್ಯಾಯ ಮತ್ತು ಬಾದಲ್‌ಸರ್ಕಾರ್ ಅವರೂ ತಮ್ಮ ನಾಟಕಗಳನ್ನು ಪ್ರದರ್ಶಿಸಲಿದ್ದಾರೆ. ಈ ಎಲ್ಲ ನಾಟಕ ತಂಡಗಳು ಮತ್ತು ಗುಂಪುಗಳಲ್ಲದೆ ಬಂಗಾಳದಲ್ಲಿ ತೀರ ಜನಪ್ರಿಯವಾಗಿರುವ ರಂಗಭೂಮಿಯ ಇನ್ನೊಂದು ಪ್ರಕಾರವೂ ಇದೆ. ಅದೇ 'ಜಾತ್ರಾ'. ತನ್ನ ಸಂಗೀತ ಮತ್ತು ನೃತ್ಯಗಳಿಂದ ಶ್ರೀಮಂತವಾಗಿರುವ 'ಜಾತ್ರಾ' ಹೆಚ್ಚಾಗಿ ಗ್ರಾಮೀಣ ಮತ್ತು ಅರೆಗ್ರಾಮಾಂತರ ಪ್ರದೇಶಗಳಲ್ಲಿನ ಜನರನ್ನು ವಿಶೇಷವಾಗಿ ರಂಜಿಸುತ್ತದೆ.

ಬಂಗಾಳಿ ರಂಗಭೂಮಿ ಮತ್ತು ಚಲನಚಿತ್ರಗಳು ನೇರವಾದ ಸಂಬಂಧ ಹೊಂದಿವೆ. ರಂಗಭೂಮಿ ಮತ್ತು ಚಲನಚಿತ್ರಗಳ ಮಧ್ಯೆ ನಟರು, ಕಲಾವಿದರುಗಳ ವಿನಿಮಯವಾಗುತ್ತದೆ. ಐವತ್ತರ ದಶಕದಿಂದೀಚೆಗೆ ಬಂಗಾಳಿ ಚಲನಚಿತ್ರರಂಗ ಅಂಗೀಕರಿಸಿದ ಮಾರ್ಗ ಸಾಮಾಜಿಕ ವಾಸ್ತವಿಕತಾ ವಾದ. ಅಂತಾರಾಷ್ಟ್ರೀಯ ರಂಗದಲ್ಲಿ ಖ್ಯಾತರಾಗಿರುವ ಸತ್ಯಜಿತ್‌ರೇ, ಮೃಣಾಲ್ ಸೇನ್, ಮತ್ತು ಋತ್ವಿಕ್‌ಘಟಕ್ ಅವರಂತಹ ದಿಗ್ಗಜಗಳ ಬೆನ್ನ ಹಿಂದೆಯೇ ಪೂರ್ಣೇಂದು ಪತ್ರೀಯ, ಬುದ್ಧದೇವ ದಾಸಗುಪ್ತಾ, ಗೌತಮ್ ಘೋಷ್ ಮೊದಲಾದ ಎರಡನೆಯ ತಲೆಮಾರಿನ ನಿರ್ದೇಶಕರೂ ಹೆಸರು ಗಳಿಸುತ್ತಿದ್ದಾರೆ. ವ್ಯಾಪಾರೀದೃಷ್ಟಿಯಿಂದ ಬಂಗಾಳಕ್ಕೆ ಮಾತ್ರ ಸೀಮಿತವಾಗಿರುವ ಬಂಗಾಳಿ ಚಿತ್ರಗಳು ಬೊಂಬಾಯಿ, ಮದರಾಸುಗಳಲ್ಲಿ ತಯಾರಾದ ಮಸಾಲೆ ಚಿತ್ರಗಳೊಂದಿಗೆ ಸ್ಪರ್ಧಿಸಬೇಕಾಗಿದೆ. ಅಂತರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ದೊರೆತ ಮನ್ನಣೆ, ಪುರಸ್ಕಾರ ಹಾಗೂ ಸೀಮಿತವ್ಯಾಪ್ತಿಯೊಳಗೆ ಫಿಲ್ಮ್ ಸೊಸಾಯಿಟಿ ಚಳುವಳಿ ನೀಡುತ್ತಿರುವ ಉತ್ತೇಜನದಿಂದಾಗಿ ಬಂಗಾಳಿ ಸಿನೆಮಾಕ್ಕೆ ಈವರೆಗೂ ಅಗ್ಗದ ಮನೋರಂಜನೆಗೆ ಬಲಿಬೀಳದೆ ಜನಜೀವನದ ವಾಸ್ತವಿಕತೆಯನ್ನು ಬಿಂಬಿಸಲು ಸಾಧ್ಯವಾಗಿದೆ. ತನ್ನ ಪ್ರೇಕ್ಷಕ ಸಮುದಾಯವನ್ನು ವಿಸ್ತೃತಗೊಳಿಸುವ ನಿಟ್ಟಿನಲ್ಲಿ ಸ್ವತಃ ಸತ್ಯಜಿತ್‌ರೇ ಅವರೇ ಹಲವಾರು ಪ್ರಯೋಗಗಳನ್ನು ನಡೆಸಿದ್ದಾರೆ. ಫ್ಯಾಂಟಸಿಗಳು, ಹಾಸ್ಯಪ್ರಧಾನ ಮತ್ತು ಪತ್ತೇದಾರಿ ಕತೆಗಳನ್ನು ತಾವೇ ರಚಿಸಿ ರಾಯ್ ಅವುಗಳನ್ನು ವಿಡಂಬನಾತ್ಮಕವಾಗಿ ಚಿತ್ರೀಕರಿಸುತ್ತಾರೆ. ಬಂಗಾಲಿ ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರಗಳು ತೀರಾ ಕಡಿಮೆಯಾಗಿರುವ ಕಾರಣ ಬಂಗಾಳಿ ಚಲನಚಿತ್ರೋದ್ಯಮಕ್ಕೆ ಬಲವಾಗಿ ಬೇರೂರಲು ಕಷ್ಟ

(7ನೇ ಪುಟ ನೋಡಿ)

ಎಡರಂಗ – ಸೈದ್ಧಾಂತಿಕ ರಂಗದಲ್ಲಿ

1977ರ ನಂತರದ ಈ ನಾಲ್ಕು ವರ್ಷಗಳಲ್ಲಿ ಭಾರತದ ರಾಜಕೀಯ-ಸಾಮಾಜಿಕ ರಂಗ ಹಲವು ಮಹತ್ವಪೂರ್ಣ ಬೆಳವಣಿಗೆಗಳನ್ನು ಕಂಡಿತು. ಕೆಲವು ಸೈದ್ಧಾಂತಿಕ ತಪ್ಪುಗ್ರಹಿಕೆಗಳ ಬಗ್ಗೆ ಪುನರ್ವಿಚಾರ ಮಾಡುವಂತೆ ಇವು ಪ್ರೇರೇಪಿಸಿವೆ. ಈ ಬೆಳವಣಿಗೆಗಳಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಸಾಧನೆಗಳು, ಇದು ಕಾರ್ಯನಿರ್ವಹಿಸಿದ ಬಗೆ ಅತೀ ಮುಖ್ಯವಾದುದು. ಇದರಿಂದಾಗಿ ಆಳುವ ವರ್ಗಗಳ, ತಿಳಿದೋ ತಿಳಿಯದೆಯೋ ಅವರ ಏಜೆಂಟರಂತೆ ವರ್ತಿಸುವವರ ಅಪಪ್ರಚಾರಗಳು ತಮ್ಮ ತೀವ್ರತೆಯನ್ನು ಸಂಪೂರ್ಣ ಕಳೆದುಕೊಂಡಿವೆ. ಇನ್ನೊಂದೆಡೆ ಎಡಪಂಥೀಯ ಸೋಗುಹಾಕಿಕೊಂಡವರು, ಗೊಂದಲಮಯತೆಯನ್ನು ವಸ್ತುನಿಷ್ಠತೆಯೆಂದು ಭ್ರಮಿಸಿಕೊಂಡ ಎಡಪಂಥೀಯರು ವಿಕೇಂದ್ರೀಕರಣ, ಪ್ರಜಾಪ್ರಭುತ್ವ, ಹಳ್ಳಿ-ಪಟ್ಟಣ ಇತ್ಯಾದಿ ವಿಷಯಗಳ ಬಗ್ಗೆ ತಮ್ಮ ನಿಲುವನ್ನು ಪುನರ್ವಿಮರ್ಶಿಸುವಂತಾಗಿದೆ.

ನಮ್ಮ ಇತ್ತೀಚಿನ ಇತಿಹಾಸದ ಕರಾಳ ಅವಧಿಯ ನಂತರ ಹೊಸ ಉತ್ಸಾಹ ಮೂಡಿಸಿದ್ದ 1977ರ ಜನತಾಪಕ್ಷ ಜನತೆಗಾಗಿ ಏನೂ ಮಾಡದೆ, ಕಾಂಗ್ರೆಸ್ ದಾರಿಯನ್ನೇ ಹಿಡಿದು ಕ್ರಮೇಣ ಅರ್ಥಹೀನ ಪರದಾಟಗಳಲ್ಲಿ ಸಿಲುಕಿಕೊಂಡು ಚೂರುಚೂರಾಗಿ ಹೋದದ್ದು, ತುರ್ತುಪರಿಸ್ಥಿತಿಯ ಆಡಳಿತ ಕೂಟವೇ ಮತ್ತೆ ಇತರ ರಾಜ್ಯಗಳ ಜನತೆಗೆ ಬೇಕೆನಿಸಿದ್ದು ಇವೆಲ್ಲದರೊಂದಿಗೆ ಪಶ್ಚಿಮ ಬಂಗಾಳದ ನಾಲ್ಕು ವರ್ಷಗಳನ್ನು ಹೋಲಿಸಿ ನೋಡುವ ಯಾರೇ ಆದರೂ ಆಳುವವರ್ಗಗಳು ಎಡಪಂಥೀಯರ ವಿರುದ್ಧ, ವಿಶೇಷವಾಗಿ ಕಮ್ಯೂನಿಸ್ಟರ ವಿರುದ್ಧ ನಡೆಸುವ ಯಾವುದೇ ಅಪಪ್ರಚಾರವನ್ನು ಈಗ ನಂಬುವುದಿಲ್ಲ. ಪಶ್ಚಿಮ ಬಂಗಾಳದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲೇ ದೀರ್ಘಕಾಲದ ನಂತರ ಎಡರಂಗ ಸರ್ಕಾರ 1978ರಲ್ಲಿ ನಡೆಸಿದ ಪಂಚಾಯತ್ ಚುನಾವಣೆಗಳು, ಇತ್ತೀಚೆಗೆ ನಡೆಸಿದ ಮುನಿಸಿಪಲ್ ಚುನಾವಣೆಗಳು ನಂತರ ಮೊನ್ನೆಮೊನ್ನೆ ನಡೆದ ಉಪಚುನಾವಣೆಗಳಲ್ಲಿ ಪಶ್ಚಿಮ ಬಂಗಾಳದ ಜನತೆ ಕೊಟ್ಟ ತೀರ್ಪು ಆಳುವ ವರ್ಗಗಳ ಎಲ್ಲಾ ರೀತಿಯ ಪ್ರಚಾರಕರಿಗೆ ಮುಖದ ಮೇಲೆ ಹೊಡೆದ ಏಟು. ಕೆಲವು ಬೂರ್ಜ್ವಾಪಕ್ಷಗಳನ್ನು ಕಾಂಗ್ರೆಸ್(ಐ)ಗೆ ರಾಷ್ಟ್ರೀಯ ಪರ್ಯಾಯವೆಂದು ಜನತೆಯನ್ನು ನಂಬಿಸುವುದರಲ್ಲಿ ತೊಡಗಿರುವ ಕೆಲವರಾದರೂ ಈಗ ಒಂದು ಬದಲೀ ಕಾರ್ಯಕ್ರಮಗಳನ್ನು ಪಡೆದಿರುವ ಪಕ್ಷ ಅಥವಾ ಪಕ್ಷಗಳ ರಂಗ ಮಾತ್ರ ಈ ದೇಶದಲ್ಲಿ ನಿಜವಾದ ಅರ್ಥದಲ್ಲಿ ರಾಷ್ಟ್ರೀಯ ಪರ್ಯಾಯವಾಗಲು ಸಾಧ್ಯ ಎಂದು ಹೇಳುವಂತಾಗಿದೆ.

ಕೆಲವು ಎಡಪಂಥೀಯರು ಅಥವಾ ಹಾಗೆಂದು ಸೋಗು ಹಾಕಿಕೊಳ್ಳುವುದರಲ್ಲಿ ಏನೋ ಪ್ರಯೋಜನ ಕಂಡುಕೊಂಡವರು "ಕಮ್ಯೂನಿಸ್ಟರಿಗೆ ನಗರದ ಕಾರ್ಮಿಕರ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರ ಹೋರಾಡಲು ಗೊತ್ತು. ರೈತರ ಹಾಗೂ ಹಳ್ಳಿಯ ಬಡವರ ಪರವಾಗಿ ಹೋರಾಡುವುದು ಇವರಿಗೆ ಬೇಕಿಲ್ಲ" ಎಂದಿತ್ಯಾದಿಯಾಗಿ ಹರಟುತ್ತಿರುತ್ತಾರೆ. ಕಮ್ಯೂನಿಸ್ಟರು ವಿಕೇಂದ್ರೀಕರಣದ ವಿರೋಧಿಗಳು ಎಂದೂ ಹಲವರು ಕಣ್ಣುಮುಚ್ಚಿ ನಂಬಿದ್ದಾರೆ. ಇವರೆಲ್ಲರಿಗೂ ಭಾರತದ ಕಮ್ಯೂನಿಸ್ಟರ ಅರ್ಧಶತಮಾನದ ಹೋರಾಟದ ಚರಿತ್ರೆಯನ್ನು ಪರಿಶೀಲಿಸಲು ಪುರುಸೊತ್ತಿರಲಿಕ್ಕಿಲ್ಲ. ಆದರೆ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಕಳೆದ ನಾಲ್ಕು ವರ್ಷಗಳಲ್ಲಿ ತನಗೆ ದೊರೆತ ಸೀಮಿತ ಅವಕಾಶದಲ್ಲೇ ಕಾರ್ಯನಿರ್ವಹಿಸಿದ ರೀತಿಯನ್ನಾದರೂ ಪರಿಶೀಲಿಸಿ ತಮ್ಮ ಕೆಲವು ಗ್ರಹಿಕೆಗಳ ಬಗ್ಗೆ ಅವರು ಪುನರ್ವಿಮರ್ಶೆ ಮಾಡುವುದೊಳ್ಳೆಯದು.

ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಚುನಾವಣೆಗಳು ನಡೆದಾಗಲೇ ಪಕ್ಷದ ರಾಜ್ಯಗಳಲ್ಲಿಯೂ ಪಂಚಾಯತ್ ಚುನಾವಣೆ ನಡೆದಿತ್ತು. ಬೇರೆ ರಾಜ್ಯಗಳಲ್ಲೂ ಬಹಳ ಹಿಂದೆಯಾದರೂ ಪಂಚಾಯತ್ ಚುನಾವಣೆಗಳು ನಡೆದಿದ್ದವು. ಆದರೆ ಅಲ್ಲಿ ಪಂಚಾಯತುಗಳು ನಿಜವಾದ ವಿಕೇಂದ್ರೀಕರಣದ ಸಾಧನಗಳಾಗಲಿಲ್ಲ ಎಂಬುದು ಎಲ್ಲರಿಗೂ ಗೊತ್ತು. ಆದರೆ ಪಶ್ಚಿಮ ಬಂಗಾಳದಲ್ಲಿ ಚುನಾಯಿತ ಪಂಚಾಯತುಗಳ ಮೂಲಕ ಎಡರಂಗ ಸರ್ಕಾರ ಸಾಧಿಸಿದ ಅಂಶಗಳು ಹಲವು. ಕನಿಷ್ಟ ಕೂಲಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಭೂಸುಧಾರಣಾ ಕಾನೂನನ್ನು ಸಂಪೂರ್ಣವಾಗಿ ಅನ್ವಯಿಸುವಲ್ಲಿ ಕೂಲಿಗಾಗಿ ಕಾಳು ಯೋಜನೆಯನ್ವಯ ಹಳ್ಳಿಯ ನಿರುದ್ಯೋಗದ ತೀವ್ರತೆಯನ್ನು ಕಡಿಮೆಗೊಳಿಸುವಲ್ಲಿಪಂಚಾಯತುಗಳು ವಹಿಸಿದ ಪಾತ್ರವನ್ನು ಬೇರೆ ರಾಜ್ಯಗಳ ಪಂಚಾಯತುಗಳ ಕಾರ್ಯನಿರ್ವಹಣೆಯೊಂದಿಗೆ ಹೋಲಿಸಿದರೆ ವಿಕೇಂದ್ರೀಕರಣದ ಪರಿಕಲ್ಪನೆಯ ಬಗ್ಗೆ ನಿರ್ವಾತದಲ್ಲಿ ಚರ್ಚೆ ನಿರ್ಧರಿಸುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದು 'ವಿಕೇಂದ್ರೀಕರಣ' ಮಾತ್ರವಲ್ಲ ಸಾಮಾಜಿಕ ಪರಿವರ್ತನೆಯ ಇತರ ಪರಿಕಲ್ಪನೆಗಳ ಮಟ್ಟಿಗೂ ನಿಜ. ಅದು ನಗರ-ಹಳ್ಳಿ ನಡುವಿನ ವ್ಯತ್ಯಾಸದ ಕುರಿತಾಗಿರಬಹುದು ಅಥವಾ ಜಾತಿ, ಧರ್ಮ ಇತ್ಯಾದಿಗಳ ಪ್ರಭಾವದ ಬಗೆಗಾಗಿರಬಹುದು. ಇದನ್ನೇ ವರ್ಗದೃಷ್ಟಿಯೆನ್ನುವುದು. ಸಾಮಾಜಿಕ ಬದಲಾವಣೆಯ ಸಿದ್ಧಾಂತಗಳ ಚರ್ಚೆಗಳಲ್ಲಿ ವರ್ಗದೃಷ್ಟಿಯ ಅಗತ್ಯವನ್ನು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ನಾಲ್ಕು ವರ್ಷಗಳು ಮತ್ತೊಮ್ಮೆ ಸ್ಪಷ್ಟಗೊಳಿಸಿವೆ. ●

ಪ. ಬಂಗಾಳದಲ್ಲಿ ಕೂಲಿಗಾಗಿ ಕಾಳು ಯೋಜನೆ

[3ನೇ ಪುಟದಿಂದ]

ವನ್ನು ಜ್ಯೋತಿಬಸು, ಡಾ. ಅಶೋಕ್ ಮಿತ್ರ ಅವರು ಪದೇ ಪದೇ ಪ್ರಧಾನಿ, ಕೃಷಿ ಸಚಿವ ಮತ್ತು ಯೋಜನಾ ಸಚಿವರಿಗೆ ವಿವರಿಸಿದ್ದಾರೆ. ಶೇ. 77ರಷ್ಟು ಧಾನ್ಯ ಬಳಕೆಗೆ ಸರ್ಟಿಫಿಕೇಟುಗಳನ್ನು ಪ. ಬಂಗಾಳ ಸಲ್ಲಿಸಿದೆಯೆಂದು ಕೇಂದ್ರ ಯೋಜನಾ ಸಚಿವರೇ 12-11-80ರ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ. ಆದರೂ ಕೇಂದ್ರ ಹಳೇ ರಾಗವನ್ನೇ ಹಾಡುತ್ತಿದೆ.

ಪ. ಬಂಗಾಳಕ್ಕೆ ಮಂಜೂರು ಮಾಡಿದ ಪ್ರಮಾಣಕ್ಕಿಂತ ತೀರ ಕಡಿಮೆ ಧಾನ್ಯವನ್ನು ಒದಗಿಸಿದೆ. ಆದರೆ ಮಿಕ್ಕೆಲ್ಲ ರಾಜ್ಯಗಳಿಗೆ ಮಂಜೂರಾದ ಪ್ರಮಾಣ ಪೂರ್ತಿ ಒದಗಿಸಿದೆ. ಏಕೆಂದರೆ, ಪ. ಬಂಗಾಳ ಬಿಟ್ಟರೆ ಮಿಕ್ಕ 5 ರಾಜ್ಯಗಳಲ್ಲೂ ವಿಧಾನಸಭೆಗೆ ಮಧ್ಯಕಾಲೀನ ಚುನಾವಣೆ ನಡೆದಿತ್ತು. ಇಂಥ ಪಕ್ಷಪಾತ ಇದ್ದರೂ ಪ. ಬಂಗಾಳದ ಗ್ರಾಮೀಣ ಉದ್ಯೋಗ ಅವಕಾಶ ಸೃಷ್ಟಿ ತುಂಬ ಗಮನಾರ್ಹವಾಗಿದೆ.

ಇದೂ ಅಲ್ಲದೆ, 1980ರ ಅಕ್ಟೋಬರ್‌ನಲ್ಲಿ ಜ್ಯೋತಿಬಸು ಒಂದು ಹೇಳಿಕೆಯಲ್ಲಿ ತಿಳಿಸಿರುವಂತೆ, ಎಲ್ಲ ರಾಜ್ಯಗಳಿಗೂ 4 ಲಕ್ಷ ಟನ್ನುಗಳ ಹೆಚ್ಚುವರಿಧಾನ್ಯ ಮಂಜೂರಾಗಿದೆ. ಆದರೆ ಪ. ಬಂಗಾಳಕ್ಕೆ ಮಾತ್ರ 30,000 ಟನ್ ಮಂಜೂರಾಗಿದೆ.

ರಾವ್‌ಬೀರೇಂದ್ರಸಿಂಗ್ ಅವರು ಕಳಿಸಿದ ಇಬ್ಬರು ಅಧಿಕಾರಿಗಳು ಮೂರೇ ದಿನಗಳ ಅವಧಿಯಲ್ಲಿ ಇಡೀ ಯೋಜನೆಯನ್ನು ಸರ್ವೆಮಾಡಿ, ದೋಷಗಳ ಪಟ್ಟಿಯನ್ನು ಮಾತ್ರ ಸಲ್ಲಿಸಿದ್ದಾರೆಂದು ಸಂಸತ್ ಸದಸ್ಯ ಜ್ಯೋತಿರ್ಮಯ ಬಸು ಅವರು 1980ರ ನವೆಂಬರ್ 24ರಂದು ಲೋಕಸಭೆಯಲ್ಲಿ ಅರ್ಧಗಂಟೆಯ ಚರ್ಚೆ ನಡೆಸಿದ್ದರು.

ಈಗ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮದ ಬಗ್ಗೆ ಮಾರ್ಗದರ್ಶಕ ನೀತಿಯನ್ನು ಕೇಂದ್ರವು ರಾಜ್ಯಗಳಿಗೆ ಕಳುಹಿಸಿದೆ. ಪ. ಬಂಗಾಳ ಸರ್ಕಾರ ಈ ಬಗ್ಗೆ ತನ್ನ ಅಭಿಪ್ರಾಯಗಳನ್ನು ಮಂಡಿಸಿದೆ. ಇದು ರಾಷ್ಟ್ರೀಯ ಪಂಚವಾರ್ಷಿಕ ಯೋಜನೆಯ ಅಂಗವಾಗಿರುವುದರಿಂದ ವಿವರಗಳನ್ನು ಯೋಜನಾ ಆಯೋಗ ಮತ್ತು ರಾಜ್ಯಸರ್ಕಾರಗಳು ಚರ್ಚಿಸಬೇಕು, ಮಂಜೂರಾತಿಗಳನ್ನು ಆಯೋಗವೇ ನಡೆಸಬೇಕು ಎಂದು ಪ. ಬಂಗಾಳ ಸರ್ಕಾರ ಕೇಳಿದೆ. ಸಂವಿಧಾನದ ಪ್ರಕಾರ, ಗ್ರಾಮೀಣ ಅಭಿವೃದ್ಧಿಯು ರಾಜ್ಯದ ಕೆಲಸವಾಗಿರುವುದರಿಂದ, ಕಾರ್ಯಕ್ರಮವನ್ನು ಕೇಂದ್ರಸರ್ಕಾರ ಏಕಮುಖವಾಗಿ ನಿರ್ಧರಿಸಬಾರದು ಎಂದು ಒತ್ತಾಯಿಸಿದೆ.

ಜನತೆಯ ಆಯ್ಕೆಯಾದ ಪ್ರತಿನಿಧಿಗಳಾದ ಪಂಚಾಯತಿಗಳ ಮೂಲಕ ಈ ಕಾರ್ಯಕ್ರಮದ ಯೋಜನೆಗಳನ್ನು ಜಾರಿಗೊಳಿಸಲು ಪ. ಬಂಗಾಳ ಸರ್ಕಾರದ ಎಡರಂಗ ಸರ್ಕಾರ ನಿರ್ಧರಿಸಿದೆ. ಈಗಾಗಲೇ ರಾಜ್ಯಮಟ್ಟದ ಚಾಲನಾಸಮಿತಿ ಅಸ್ತಿತ್ವದಲ್ಲಿದೆ. ರಚನೆಯಾಗಲಿರುವ ಜಿಲ್ಲಾಮಟ್ಟದ ಚಾಲನಾಸಮಿತಿಗೆ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರೇ ನೇತೃತ್ವ ವಹಿಸುತ್ತಾರೆ. ಜಿಲ್ಲಾ ಮ್ಯಾಜಿಸ್ಟ್ರೇಟರು ಅವರ ಉಪಾಧ್ಯಕ್ಷರಾಗಿರುತ್ತಾರೆ. ○

ಕೇಂದ್ರವು ಆಹಾರವನ್ನು ಒಂದು ರಾಜಕೀಯ ಅಸ್ತ್ರವನ್ನಾಗಿ ಪ. ಬಂಗಾಳದ ವಿರುದ್ಧ ಬಳಸಿಕೊಳ್ಳುತ್ತಿದೆ ಎಂಬ ಅಂಶವು ಈ ಕೆಳಗಿನ ಪಟ್ಟಿಯಿಂದ ತಿಳಿಯುತ್ತದೆ.

1980-81ರಲ್ಲಿ ಮಂಜೂರಾದ ಮತ್ತು ಒದಗಿಸಿದ ಧಾನ್ಯ
(ಟನ್ನುಗಳಲ್ಲಿ)

ರಾಜ್ಯ	ಒಟ್ಟು ಮಂಜೂರು	ಒಟ್ಟು ಒದಗಿಸಿದ್ದು
ಪ. ಬಂಗಾಳ	70,000	20,000
ಮಹಾರಾಷ್ಟ್ರ	40,000	40,000
ಮಧ್ಯಪ್ರದೇಶ	1,99,000	1,99,000
ಒರಿಸ್ಸಾ	82,000	82,000
ರಾಜಾಸ್ಥಾನ	1,30,000	1,30,000
ಉತ್ತರ ಪ್ರದೇಶ	1,95,000	1,95,000

ಮೂಲ : ಪ್ರಶ್ನೆಗೆ ಲೋಕಸಭೆ ಉತ್ತರ 28–7–1980)

ಪಶ್ಚಿಮ ಬಂಗಾಳದ ಸಾಂಸ್ಕೃತಿಕ ಪರಂಪರೆ

[6ನೇ ಪುಟದಿಂದ]

ವಾಗುತ್ತಿದೆ. ಹೊಸ ನಿರ್ಮಾಪಕರನ್ನೂ ನಿರ್ದೇಶಕರನ್ನೂ ವ್ಯಾಪಾರಿ ಚಿತ್ರರಂಗ ಹತ್ತಿಕ್ಕುತ್ತಿದೆ. ರಾಜ್ಯ ಸರಕಾರ ನಿರ್ಮಿಸಿದ ಕೆಲವು ಚಿತ್ರಗಳನ್ನೂ ಬಿಡುಗಡೆಗೊಳಿಸುವುದು ಇನ್ನೂ ಸಾಧ್ಯವಾಗಿಲ್ಲವೆಂದರೆ ವ್ಯಾಪಾರಿ ಚಿತ್ರರಂಗದ ವಿಷವರ್ತುಲ ಹೇಗೆ ಕೆಲಸಮಾಡುತ್ತಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇಷ್ಟಿದ್ದರೂ ಬಂಗಾಳಿ ಚಿತ್ರರಂಗ ಪ್ರೇಕ್ಷಕನೊಂದಿಗೆ ಆತ್ಮೀಯ ಸಂಬಂಧ ವಿರಿಸಿಕೊಂಡಿದೆ. ಒಳ್ಳೆಯ ಅಭಿರುಚಿಯಿರುವ ಪ್ರೇಕ್ಷಕ ಈಗಲೂ ನಿರ್ದೇಶಕರನ್ನು ಕಂಡು ಕಮರ್ಷಿಯಲ್ ಸಿನಿಮಾ ಭೂಗತ ಮಾಡಿಸಿಬಿಟ್ಟಿರುವ ಕಲಾತ್ಮಕ ಚಿತ್ರಗಳ ಖಾಸಗಿ ಪ್ರದರ್ಶನವೊಂದನ್ನು ಏರ್ಪಡಿಸಿಕೊಳ್ಳಬಹುದು. ಕಲಾವಿದರು, ನಿರ್ದೇಶಕರು ಮೊದಲಾದವರೊಡನೆ ನಿಸ್ಸಂಕೋಚವಾಗಿ ಚರ್ಚಿಸಬಹುದು. ಅವರಿಗೆ ತ್ರಾಸದಾಯಕವಾಗುವ ಪ್ರಶ್ನೆಗಳನ್ನೂ ಕೇಳಬಹುದು. ಚಿತ್ರ ಅಥವಾ ನಾಟಕವನ್ನು ನೋಡುವುದರ ಜೊತೆಗೆ ಅದನ್ನು ನಿರ್ಮಿಸುವಾಗ ನಟ ಅಥವಾ ನಿರ್ದೇಶಕ ಎದುರಿಸಿದ ಸಂಕಟ ನೋವು, ಗಳಿಸಿದ ಅನುಭವ, ಇತ್ಯಾದಿಗಳನ್ನು ಪ್ರೇಕ್ಷಕ ಅವರೊಂದಿಗೆ ಹಂಚಿಕೊಳ್ಳಬಹುದು. ಇದು ಬಹುಶಃ ಚಲನಚಿತ್ರ ಮತ್ತು ರಂಗಭೂಮಿ ಹೆಚ್ಚು ಸಂಘಟಿತವಾಗಿರುವ ಅನೇಕ ರಾಜ್ಯಗಳಲ್ಲಿ ಪ್ರೇಕ್ಷಕನಿಗೆ ದೊರೆಯಲಾರದ ಅನುಭವ. ●

REG. KRNB-368 MAG (2) PRB DECR 319/78-79 ಜೂನ್ 28, 1981

'ಬಂಗಾಲದ ದಾರಿ ನಮ್ಮ ದಾರಿ'

-ಎಂ. ಕೆ.

ಪಶ್ಚಿಮ ಬಂಗಾಳದ ಎಡರಂಗ ಸರಕಾರವು ಅಧಿಕಾರಕ್ಕೆ ಬಂದು ಜೂನ್ 22ಕ್ಕಾಗುವಾಗ ನಾಲ್ಕು ವರ್ಷಗಳು ತುಂಬಿದುವು. ಎಡರಂಗ ಸರಕಾರವು ಅಧಿಕಾರಕ್ಕೆ ಬಂದಂದಿನಿಂದ ಅನೇಕ ಎಡರುತೊಡರುಗಳನ್ನು ಎದುರಿಸಬೇಕಾಯಿತು. ಪ್ರಕೃತಿಯ ಕೋಪ ಒಂದೆಡೆಯಾದರೆ, ಸರ್ವಾಧಿಕಾರಿ ಶಕ್ತಿಯ ಕುತಂತ್ರಗಳು ಮತ್ತೊಂದೆಡೆ. ಇದರೊಂದಿಗೆ ಅಸ್ಸಾಮ್ ಚಳುವಳಿಯಂತಹ ಪ್ರತ್ಯೇಕತಾವಾದಿ ಚಳುವಳಿಗಳ ಬಿಸಿ. ಪರಿಣಾಮವಾಗಿ ಪಶ್ಚಿಮ ಬಂಗಾಳದಲ್ಲೂ ಕೆಲವೆಡೆ ಪ್ರತ್ಯೇಕತಾ ಚಳುವಳಿ ಬೆಳೆಸುವ ಪ್ರಯತ್ನಗಳೂ ಎಡರಂಗ ಸರಕಾರಕ್ಕೆ ಸವಾಲಾಗಿ ಬಾದಿದ್ದುವು. ಹಿಂದಿನ ಕಾಂಗ್ರೆಸ್ ಸರಕಾರದ ತಪ್ಪುನೀತಿಗಳ ಪರಿಣಾಮವಾಗಿ ತೀರಾ ಹದಗೆಟ್ಟಿದ್ದ ಆರ್ಥಿಕ-ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸಲು ಹೆಣಗಾಡುವುದರೊಂದಿಗೆ, ಈ ಮೇಲೆ ಹೇಳಿದ ಎಲ್ಲಾ ಎಡರುತೊಡರುಗಳನ್ನು ಎದುರಿಸಿ ಜನತೆಯ ವಿಶ್ವಾಸವನ್ನು ಇನ್ನೂ ಹೆಚ್ಚಿಸಿಕೊಳ್ಳುವುದರಲ್ಲಿ ಎಡರಂಗ ಸರಕಾರವು ಯಶಸ್ವಿಯಾಗಿದೆ. ಇದು ಅತ್ಯಂತ ಹೆಮ್ಮೆಯ ವಿಚಾರ. ಇದಕ್ಕಾಗಿ ಎಡರಂಗ ಸರಕಾರಕ್ಕೆ ಅಭಿನಂದನೆಗಳು.

ಪಶ್ಚಿಮ ಬಂಗಾಳದ ಎಡರಂಗ ಸರಕಾರ, ಅಲ್ಲಿಯ ಸಾಧನೆಗಳು-ಇವನ್ನೆಲ್ಲಾ ಇಡೀ ದೇಶದ ಜನತೆಯ ಹೋರಾಟದ ಅಸ್ತ್ರಗಳು ಎಂದು ನಾವು ಭಾವಿಸುತ್ತೇವೆ. ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯನ್ನು ಸಂರಕ್ಷಿಸುವ, ಕೇಂದ್ರೀಕೃತ ವ್ಯವಸ್ಥೆಯ ಚೌಕಟ್ಟು ಮತ್ತು ಘಟನೆಗಳು ಕೊಡುವ ಸೀಮಿತ ಅಧಿಕಾರದೊಳಗೆ ಕೆಲಸಮಾಡಬೇಕಾಗಿದೆ ಎಡರಂಗ ಸರಕಾರ. ಈ ಇತಿ ಮಿತಿಯನ್ನು ಅರಿತುಕೊಂಡು, ಇರುವ ಸೀಮಿತ ಅಧಿಕಾರದ ಮೂಲಕ ಜನರಿಗೆ ತಾತ್ಕಾಲಿಕ ಪರಿಹಾರವನ್ನು ಕೊಡುವುದು, ಜನಸಂಘಟನೆಗಳನ್ನು ಬೆಳೆಸಿ ರಾಜಕೀಯ ಪ್ರಜ್ಞೆಯನ್ನು ಬೆಳೆಸುವುದು, ರಾಷ್ಟ್ರದಾದ್ಯಂತ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಿ ಮುನ್ನಡೆಸಲು ಸಹಾಯಕಾರಿಯಾಗುವುದು ಎಡರಂಗ ಸರಕಾರದ ಉದ್ದೇಶವಾಗಿದೆ. ದೇಶದ ಎಡ ಪ್ರಜಾಪ್ರಭುತ್ವ ಚಳುವಳಿಯ ಒಂದು ಮುಂದುವರಿದ ನೆಲೆಯಾಗಿದೆ ಪಶ್ಚಿಮ ಬಂಗಾಳ. ಈ ಎಲ್ಲ ದೃಷ್ಟಿಯಿಂದ ನೋಡಿದಲ್ಲಿ ಪಶ್ಚಿಮ ಬಂಗಾಳದಲ್ಲಿನ ಸಾಧನೆಗಳ ಮಹತ್ವತೆಯು ಅರಿವಾಗುವುದು.

ಆಳುವವರ್ಗಗಳು ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರಕಾರವು ಪಶ್ಚಿಮ ಬಂಗಾಳದಲ್ಲಿನ ಎಡರಂಗ ಸರಕಾರದತ್ತ ದೇಶದ ಜನತೆ ನೋಡುವುದನ್ನು ಸಹಿಸದೆ, ಎಡರಂಗ ಸರಕಾರವನ್ನು ಉರುಳಿಸುವ ಪ್ರಯತ್ನಗಳನ್ನು ನಡೆಸುತ್ತಾ ಬಂದಿದೆ. ಆದರೆ ಪಶ್ಚಿಮ ಬಂಗಾಳದ ಜನತೆ ಎಡರಂಗ ಸರಕಾರಕ್ಕೆ ಇನ್ನೂ ಹೆಚ್ಚಿನ ಬೆಂಬಲ ನೀಡುತ್ತಲಿರುವುದು ಇತ್ತೀಚಿನ ಚುನಾವಣೆಗಳಿಂದ ಸ್ಪಷ್ಟವಾಗಿದೆ. ಎಡ ಪ್ರಜಾಪ್ರಭುತ್ವ ಚಳುವಳಿಯ ಮುಂದುವರಿದಿರುವ ವಿಭಾಗವಾದ ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರವನ್ನು ಉರುಳಿಸಲು ನಡೆಸುವ ಸರ್ವಾಧಿಕಾರ ಕ್ರಮಗಳ ವಿರುದ್ಧ ದೇಶದಾದ್ಯಂತ ಹೋರಾಡುವುದು ಅತೀ ಅಗತ್ಯ. ಕಾಂಗ್ರೆಸ್ ಸರಕಾರಗಳು ನಡೆಸುತ್ತಿರುವ ದುರಾಡಳಿತ ಮತ್ತು ಜನವಿರೋಧಿ ನೀತಿಗಳ ವಿರುದ್ಧ ದೇಶದ ಎಲ್ಲೆಡೆಗಳಲ್ಲೂ ವಿಶಾಲ ತಳಹದಿಯ ಐಕ್ಯತೆಯಿಂದ ಎಡ ಪ್ರಜಾಪ್ರಭುತ್ವ ಶಕ್ತಿಗಳ ನೇತೃತ್ವದಲ್ಲಿ ಹೋರಾಟ ನಡೆಸುವುದೇ ಎಡರಂಗ ಸರಕಾರವನ್ನು ಉಳಿಸಲು ನಾವು ಅನುಸರಿಸಬೇಕಾಗಿರುವ ಮಾರ್ಗ.

ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಬೇಕು ಎನ್ನುವ ವಾದವನ್ನು ತಮಗೇನೂ ಮಾಡಲು ಸಾಧ್ಯವಿಲ್ಲದಿರುವುದರಿಂದ, ತಮ್ಮ ಅಸಮರ್ಥತೆಯನ್ನು ಮರೆಮಾಚಲು ಪಶ್ಚಿಮ ಬಂಗಾಳದ ಎಡರಂಗ ಸರಕಾರದ ನೇತಾರರು ಮುಂದಿಡುತ್ತಿದ್ದಾರೆ ಎಂಬ ಕುಹಕದ ಪ್ರಚಾರ ನಡೆದಿದೆ. ಆದರೆ ಇದು ಶುದ್ಧ ಸುಳ್ಳು. ಭಾರತ ದೇಶದ ಪರಿಸ್ಥಿತಿಯ ಬಗ್ಗೆ ಆಳವಾಗಿ ವಿಮರ್ಶಿಸಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮದಲ್ಲಿ "ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ"ಯನ್ನು ಕೇಳಲಾಗಿದೆ. ಬೇರೆ ಬೇರೆ ಭಾಷಾ-ಸಂಸ್ಕೃತಿಗಳಿಂದ ಮತ್ತು ವೈವಿಧ್ಯತೆಗಳಿಂದ ಕೂಡಿದ ಬಹುರಾಷ್ಟ್ರಗಳ ಒಕ್ಕೂಟವಾದ ಭಾರತ ದೇಶದ ಸರ್ವತೋಮುಖ ಅಭಿವೃದ್ಧಿ ಮತ್ತು ಎಲ್ಲಾ ಜನಾಂಗಗಳ ಬೆಳವಣಿಗೆಯ ದೃಷ್ಟಿಯಿಂದ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಅವಶ್ಯ. ಭಾರತ ದೇಶದಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಬೆಳೆಸಲು ಹೆಣಗಾಡುತ್ತಿರುವ ಶಕ್ತಿಗಳು ಕೇಂದ್ರೀಕೃತ ವ್ಯವಸ್ಥೆಯನ್ನು ಬೆಳೆಸಿ, ದೇಶದ ಎಲ್ಲಾ ಪ್ರದೇಶ ಮತ್ತು ಜನಾಂಗಗಳ ಸರ್ವತೋಮುಖ ಅಭಿವೃದ್ಧಿಗೆ ಅಡ್ಡಿಯನ್ನುಂಟುಮಾಡಿವೆ. ಬಹುಶಃ ವೈಜ್ಞಾನಿಕವಾಗಿ ವಿಶ್ಲೇಷಿಸಿ ರಾಜ್ಯ ಸ್ವಾಯತ್ತೆಯ ಬೇಡಿಕೆಯನ್ನು ಮುಂದಿಟ್ಟು ಹೋರಾಡುತ್ತಾ ಬಂದಿರುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೊಂದೇ ಆಗಿದೆ. ಪ್ರಾದೇಶಿಕ ಅಥವಾ ಸಂಕುಚಿತ ಭಾವನೆಯನ್ನು ಅದರೊಂದಿಗೇ ಹೋರಾಡುತ್ತಲೂ ಬಂದಿದೆ. ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರವು ಅಧಿಕಾರಕ್ಕೆ ಬಂದು, ರಾಜ್ಯದ ಹಕ್ಕುಗಳ ಮೇಲೆ ಅಕ್ರಮ ನಡೆಯುವಾಗ ಸ್ವಾಭಾವಿಕವಾಗಿಯೇ ಎಡರಂಗ ಸರಕಾರದ ಮುಖಂಡತ್ವವನ್ನು ವಹಿಸಿರುವ ಸಿ. ಪಿ. ಐ. (ಎಂ) ಈ ಸಮಸ್ಯೆಯ ಮೇಲೆ ಹೆಚ್ಚು ಗಮನಹರಿಸಿದೆ.

ಪಶ್ಚಿಮ ಬಂಗಾಳದ ಎಡರಂಗ ಸರಕಾರಕ್ಕೆ ಬೆಂಬಲವಾಗಿ ತ್ರಿಪುರಾ ಮತ್ತು ಕೇರಳಗಳಲ್ಲಿನ ಎಡರಂಗ ಮತ್ತು ಎಡ ಪ್ರಜಾಪ್ರಭುತ್ವ ಸರಕಾರಗಳೂ, ಇತರ ಕಾಂಗ್ರೆಯೇತರ ಸರಕಾರಗಳೂ, ದೇಶದ ಪ್ರಜಾಪ್ರಭುತ್ವವಾದಿ ಜನತೆಯು ನಿಂತು, ಅಲ್ಲಿಯ ಸಾಧನೆಗಳನ್ನು ಗಟ್ಟಿಗೊಳಿಸಬೇಕಾಗಿದೆ. ಉಳಿದೆಡೆಗಳಲ್ಲಿ ಮುನ್ನಡೆ ಸಾಧಿಸಬೇಕಾಗಿದೆ.

ಬಂಗಾಳದ ದಾರಿಯೇ ನಮ್ಮ ದಾರಿ !

ಹೊಸ ನಾಯಕತ್ವ

"ಪಂಚಾಯತ್ ರಾಜ್" ಎಂದು ಕಾಂಗ್ರೆಸ್ ಸರ್ಕಾರ ದಶಕಗಳಿಂದಲೂ ಬಡಬಡಿಸುತ್ತಿದೆ. ಆದರೆ ಅದರ ನಿಜವಾದ ಸೃಷ್ಟಿಗೆ ಅದು ಎಂದೂ ಪ್ರಯತ್ನಗಳನ್ನು ಮಾಡಿಲ್ಲ.

ಪಶ್ಚಿಮ ಬಂಗಾಳದ ವಾಮರಂಗ ಸರ್ಕಾರ ಈ ದಿಸೆಯಲ್ಲಿ ವಿನೂತನ ಪ್ರಯೋಗ ಕೈಗೊಂಡು ಯಶಸ್ವಿಯಾಗಿದೆ. ಮೂರು ಹಂತದ ಪಂಚಾಯಿತಿ ವ್ಯವಸ್ಥೆ ಈಗ ಅಲ್ಲಿ ಜಾರಿಯಲ್ಲಿದೆ: ಗ್ರಾಮ ಪಂಚಾಯಿತಿ, ಪಂಚಾಯಿತಿ ಸಮಿತಿ (ಬ್ಲಾಕ್ ಮಟ್ಟ) ಮತ್ತು ಜಿಲ್ಲಾ ಪರಿಷತ್ (ಜಿಲ್ಲಾ ಮಟ್ಟ) ಇವೇ ಆ ಆಡಳಿತ ವಿಕೇಂದ್ರೀಕರಣದ ಹಂತಗಳು.

ಪಂಚಾಯಿತಿಗಳಿಗೆ 1978 ರ ಜೂನ್‌ನಲ್ಲಿ ಮೊದಲ ಚುನಾವಣೆ ನಡೆಯಿತು. 30,000 ಕ್ಷೇತ್ರಗಳಲ್ಲಿ 25 ಮಿಲಿಯ ಮತದಾರರು 56,000 ಪಂಚಾಯಿತಿ ಪ್ರತಿನಿಧಿಗಳನ್ನು ಆಯ್ಕೆಮಾಡಿದರು. ಅಧಿಕಾರದ ಪ್ರಜಾಪ್ರಭುತ್ವವಾದಿ ವಿಕೇಂದ್ರೀಕರಣದ ಸಾಧನಗಳನ್ನಾಗಿ ಪಂಚಾಯಿತಿಗಳನ್ನು ಬೆಳೆಸುವುದು ಈ ವ್ಯವಸ್ಥೆಯ ಮುಖ್ಯ ಉದ್ದೇಶವಾಗಿತ್ತು. ಯೋಜನೆಗಳ ಜಾರಿಯಲ್ಲಿ ಸರ್ಕಾರಿ ಇಲಾಖೆಗಳ ಜೊತೆ ಪಂಚಾಯಿತಿಗಳು ಸಮನ್ವಯ ಸಾಧಿಸುವಂತೆ ನೋಡಿಕೊಳ್ಳಲು ಸಂಪುಟ ಉಪಸಮಿತಿಯೂ ರಚಿತವಾಯಿತು.

ಕೂಲಿಗಾಗಿ ಕಾಳು ಯೋಜನೆ ಮುಂತಾದ ಅಭಿವೃದ್ಧಿ ಕಾರ್ಯಗಳಲ್ಲಿ ಪಂಚಾಯಿತಿಗಳು ಕೋಟಿಗಟ್ಟಲೆ ಹಣವನ್ನು ಮತ್ತು ಧಾನ್ಯವನ್ನು ಸದುಪಯೋಗಕರವಾಗಿ ನಿರ್ವಹಿಸಿವೆ. ಸರ್ಕಾರಿ ಅಧಿಕಾರಿಗಳಿಗಿಂತಲೂ ಯಶಸ್ವಿಯಾಗಿ ಪಂಚಾಯಿತಿ ಕಾರ್ಯಕರ್ತರು ಕೆಲಸ ಸಾಧಿಸಿದ್ದಾರೆ. ಸರ್ಕಾರಿ ಸಂಸ್ಥೆಗಳು ಎರಡು ವರ್ಷಗಳಲ್ಲಿ ಸಾಧಿಸುವುದನ್ನು ಪಂಚಾಯತಿಗಳು ಎರಡೇ ತಿಂಗಳುಗಳಲ್ಲಿ ಸಾಧಿಸಿವೆ.

ಗ್ರಾಮೀಣ ರಸ್ತೆ ನಿರ್ಮಾಣ, ರಿಪೇರಿ ಮತ್ತು ವಿಸ್ತರಣೆ, ಕುಡಿಯುವ ನೀರಿನ ಯೋಜನೆ, ಕೆರೆಕಟ್ಟೆಗಳ ನಿರ್ಮಾಣ ಇವುಗಳನ್ನು ಪಂಚಾಯತಿಗಳು ಕೈಗೊಳ್ಳುತ್ತವೆ. ಎಷ್ಟೋ ವೇಳೆ ಕೆಲಸ ವಿಪರೀತ ವೇಗದಲ್ಲಿ ಮುಂದುವರೆದು ಅದಕ್ಕೆ ತಕ್ಕಂತೆ ಕೂಲಿಗೆ ಧಾನ್ಯವನ್ನು ಒದಗಿಸುವುದೇ ಸರ್ಕಾರಕ್ಕೆ ಕಷ್ಟವಾಗಿದೆ. ಗ್ರಾಮೀಣ ಅಭಿವೃದ್ಧಿ ಯೋಜನೆಗಳು, ಜನರು ನಗರಗಳಿಗೆ ವಲಸೆ ಬರುವುದನ್ನು ಬಹುಮಟ್ಟಿಗೆ ತಡೆದಿವೆ.

ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿರುವ ಯೋಜನೆಗಳನ್ನೂ ಪಂಚಾಯಿತಿಗಳೇ ನಿರ್ವಹಿಸುತ್ತವೆ.

ಗ್ರಾಮೀಣ ಬಡವರು ಒಂದು ವರ್ಗವಾಗಿ ಸಂಘಟಿತರಾಗಲು ಪಂಚಾಯಿತಿಗಳು ಸಾಧನವಾಗುತ್ತಿವೆ. ಹಳ್ಳಿಗಳಿಗೆ ಇವು ಪ್ರಾಥಮಿಕ ಮಟ್ಟದ ಟ್ರೇಡ್ ಯೂನಿಯನ್ ಚಟುವಟಿಕೆಯ ಮೂಲವಾಗುತ್ತಿವೆ. ಗ್ರಾಮೀಣ ಬೇರುಗಳಲ್ಲಿ ಹೊಸ ನಾಯಕತ್ವ ಉದಯವಾಗುತ್ತಿದೆ.

o

ಕಾಂಗ್ರೆಸ್ ಹಿಂಸಾಚಾರ

ಏಪ್ರಿಲ್ 3, 1981ರಂದು ಕಾಂಗ್ರೆಸ್ಸಿನ ಪ. ಬಂಗಾಳ ಘಟಕವು ಬಂದ್‌ಗೆ ಕರೆ ನೀಡಿತ್ತು. ರಾಜ್ಯದ ಜನತೆ ಕಾಂಗ್ರೆಸ್ಸಿನ ಈ ಕರೆಗೆ ಪ್ರತಿಕ್ರಿಯಿಸದೇ ಇದ್ದಾಗ ಕಾಂಗ್ರೆಸ್ ಗೂಂಡಾಗಳು ವ್ಯಾಪಕ ಹಿಂಸಾಚಾರ ನಡೆಸಿದರು. ವಿವರ ಕೆಳಕಂಡಂತೆ.

134 ಬಸ್ಸುಗಳು ಮತ್ತು 40 ಟ್ರಾಮುಗಳು ಹಾನಿಗೊಳಗಾದವು.


300ಕ್ಕೂ ಮೇಲ್ಪಟ್ಟು ಜನರು ಗಾಯಗೊಂಡರು. ಸುಮಾರು 24 ಜನ ನಿಧನಹೊಂದಿದರು.

ನಿಧನರಾದವರಲ್ಲಿ 6 ಜನ ಮಹಿಳೆ (ಒಬ್ಬಳು ಗರ್ಭಿಣಿ)ಯರು ಮತ್ತು ಒಬ್ಬ ಬಾಲಕ ಸೇರಿದ್ದರು.

'......That breab should be so dear
And flesh and blood so cheap !'

—Thomas Hood.

ಶುಭಾಶಯಗಳು



ಪ. ಬಂಗಾಲದ ಎಡರಂಗ ಸರಕಾರವು ತನ್ನ ಆಡಳಿತಾವಧಿಯ ನಾಲ್ಕು ವರ್ಷಗಳನ್ನು ಪೂರ್ತಿಗೊಳಿಸಿರುವ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯದ ಮುಖಪತ್ರಿಕೆಯಾದ ಐಕ್ಯರಂಗವು ವಿಶೇಷ ಸಂಚಿಕೆಯನ್ನು ಹೊರತರುತ್ತಿರುವುದು ನನಗೆ ಸಂತೋಷವನ್ನುಂಟುಮಾಡಿದೆ.

ಈ ನಾಲ್ಕು ವರ್ಷಗಳ ಅವಧಿಯಲ್ಲಿ ನಮಗಿರುವ ಸೀಮಿತ ಅವಕಾಶದಲ್ಲೇ ರಾಜ್ಯದ ಜನತೆಯ ಏಳಿಗೆಗಾಗಿ ನಾವು ಶ್ರಮಿಸುತ್ತಿದ್ದೇವೆ. ನಮ್ಮ ಧೋರಣೆಗಳಿಗೆ ಮತ್ತು ಕಾರ್ಯಕ್ರಮಕ್ಕೆ ಜನತೆಯಿಂದ ದೊರೆತಿರುವ ಪ್ರೋತ್ಸಾಹ ಅಪಾರವಾದುದು. ಈ ಪ್ರೋತ್ಸಾಹದಿಂದಾಗಿಯೇ ನಾವು ಅನೇಕ ಎಡರುತೊಡರುಗಳನ್ನು ಎದುರಿಸಿ ಮುಂದುವರೆದಿದ್ದೇವೆ. 36 ಅಂಶಗಳ ಕಾರ್ಯಕ್ರಮದ ಬಹುಭಾಗವನ್ನು ಅನುಷ್ಠಾನಕ್ಕೆ ತಂದಿರುವ ನಾವು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರೈಸುವುದರಲ್ಲಿ ಸಂಶಯವಿಲ್ಲ. ಇದಾಗ್ಯೂ ಜನತೆಯ ಏಳಿಗೆಗಾಗಿ ನಾವು ಸಾಧಿಸಬೇಕಾದುದು ಬೇಕಾದಷ್ಟಿದೆ. ಜನತೆಯ ಬೆಂಬಲದಿಂದ ನಾವು ಮುಂದುವರೆಯುತ್ತೇವೆ.

ನಾನು ಈ ಸಂದರ್ಭದಲ್ಲಿ ನಮ್ಮ ಸಂಗಾತಿಗಳಿಗೆ, ಐಕ್ಯರಂಗ ಓದುಗರಿಗೆ ಹಾರ್ದಿಕ ಶುಭಾಶಯಗಳನ್ನು ಕೋರುವೆ.

ಕಲಕತ್ತಾ
ಜೂನ್ 23, 1981

(ಸಹಿ)
ಜ್ಯೋತಿಬಸು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT